ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ರಾಮಶಾಲಾ ಬಯಲು


ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ರಾಮಣ್ಣ ಹವಳೆ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ-ಮೇಲ್: sahithya.academy@gmail.com

**RAMASHALA BAYALU:** An Introducing Book on the Places in Karnataka that Played a Major Role in the Freedom Struggle, Written by Ramanna Havale, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ರಾಮಣ್ಣ ಹವಳೆ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೬೪

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೪೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ವಾತಂತ್ರ್ಯ ಹೋರಾಟಗಾರರ ಪರಿಚಯ ಪುಸ್ತಿಕೆಗಳನ್ನು ಹೊರ ತರುತ್ತಿರುವುದು ಬಹಳ ಸಂತೋಷಕರ ವಿಷಯ.

ಈ ಸ್ವಾತಂತ್ರ್ಯ ಹೋರಾಟ ಭಾರತದ ಚರಿತ್ರೆಯಲ್ಲಿ ವಿಶಿಷ್ಟವಾದುದು. ಏಕೆಂದರೆ ಭಾರತವು ೧೯೪೭ ಆಗಸ್ಟ್ ೧೫ರಂದು ಸ್ವತಂತ್ರವಾಯಿತು. ಆಗ ಭಾರತದಲ್ಲಿದ್ದ ೫೬೨ ಸಂಸ್ಥಾನಗಳು ಸ್ವತಂತ್ರವಾದವು. ಈಗಿನ ಗೃಹಮಂತ್ರಿಯಾದ ಸರ್ದಾರ ವಲ್ಲಭಭಾಯಿ ಪಟೇಲರು ಸಾಮ, ದಾನ, ಭೇದ, ದಂಡೋಪಾಯಗಳಿಂದ ೫೫೯ ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸಿದರು. ಆದರೆ ಹೈದರಾಬಾದ ನಿಜಾಮ, ಜುನಾಗಡ ನವಾಬ, ಜಮ್ಮು ಕಾಶ್ಮೀರದ ಹರಿಸಿಂಗ ಈ ಮೂವರು ಮಾತ್ರ ತಮ್ಮವು ಸ್ವತಂತ್ರ ದೇಶಗಳೆಂದು ಸಾರಿಕೊಂಡರು.

ಹೈದರಾಬಾದ್ ಪ್ರಾಂತದ ೧೬ ಜಿಲ್ಲೆಗಳಲ್ಲಿ ರಾಯಚೂರು ಒಂದು ಜಿಲ್ಲೆ. ಭಾರತದ ತ್ರಿವರ್ಣಧ್ವಜವು ಇಲ್ಲಿ ನಿಷೇಧಿತ ಬಟ್ಟೆಯಾಯಿತು. ವಂದೇ ಮಾತರಂ ಗೀತೆ ದೇಶದ್ರೋಹದ ಹಾಡಾಯಿತು. ಗಾಂಧೀಜಿ ಮೊದಲಾದ ನಾಯಕರ ಭಾವಚಿತ್ರಗಳು ಇಲ್ಲಿ ಬಹಿಷ್ಕೃತವಾಗಿದ್ದವು. ಈ ಸ್ಥಿತಿ ೧೯೪೭ ಆಗಸ್ಟ್ ೧೫ರಿಂದ ೧೯೪೮ ಸೆಪ್ಟೆಂಬರ್ ೧೭ರವರೆಗೆ ಇತ್ತು. ಸ್ವಾತಂತ್ರ್ಯದ ಕೂಗು ಹೆಚ್ಚಾದಾಗ, ಹೋರಾಟಗಳು ರೂಪು ಧರಿಸಿದಾಗ ನಿಜಾಮನು ಇವುಗಳನ್ನು ಬಗ್ಗುಬಡಿಯಲು ರಜಾಕಾರರನ್ನು, ಸೈನಿಕರನ್ನು, ಪೋಲಿಸರನ್ನು ಕಳುಹಿಸಿದುದು ಇತಿಹಾಸ. "ಆಜಾದ್ ಹೈದರಾಬಾದ್" ಎಂಬ ರಾಷ್ಟ್ರ ಕಟ್ಟಲು, ಹೈದರಾಬಾದ್ ಪ್ರಾಂತವನ್ನು ದಕ್ಷಿಣ ಪಾಕಿಸ್ತಾನವನ್ನಾಗಿ ಮಾಡಲು ಹುನ್ನಾರ ಹಾಕಿ ಅನೇಕ ಯೋಜನೆಗಳ ಮೂಲಕ ಕಾರ್ಯಗತಗೊಳಿಸುವ ಪ್ರಯತ್ನ ಮಾಡಿದನು. ಇದು ಇತಿಹಾಸ.

ಕರ್ನಾಟಕ ಸಂಘವು ೧೯೨೮ರಿಂದ ಪ್ರಾರಂಭವಾಗಿ ಈ ಭಾಗದ ಸ್ವಾತಂತ್ರ್ಯಕ್ಕಾಗಿ ಮಂಚೂಣಿಯಲ್ಲಿ ನಿಂತ ಏಕಮೇವ ಸಂಸ್ಥೆ. ಹೈದರಾಬಾದ್ ಪ್ರಾಂತದಲ್ಲಿ ಹೋರಾಟಕ್ಕೆ ಪ್ರಥಮ ನಾಂದಿ ಇಟ್ಟಿದುದೆ ರಾಮಶಾಲಾ ಬಯಲು. ಅಲ್ಲೇ ಕರ್ನಾಟಕ ಸಂಘದ ಸ್ಥಾಪನೆ. ಅದು ಹೈದರಾಬಾದ್ ನಿಜಾಮನ ಕ್ರೂರ ಆಡಳಿತವನ್ನು ಟೀಕಿಸುತ್ತ ನಿಜಾಮ ಕರ್ನಾಟಕ ಪರಿಷತ್ತನ್ನು ೧೯೩೪ರಲ್ಲಿ ಕಟ್ಟಿ ಜನ ಜಾಗೃತಿಯೊಂದಿಗೆ ಸ್ವಾಯತ್ತ ಆಡಳಿತಕ್ಕಾಗಿ ಮನವಿ ಹಾಗೂ ಹೋರಾಟ ಪ್ರಾರಂಭಿಸಿತು. ೧೯೩೮ರ ವಂದೇ ಮಾತರಂ ಚಳುವಳಿ, ೧೯೪೨ರ ಚಲೇಜಾವ್ ಚಳುವಳಿಯನ್ನು ರಾಯಚೂರಿನಲ್ಲಿ ಸಂಘಟಿಸಿದುದು ಈ ನೆಲದ ವೈಶಿಷ್ಟ್ಯ. ೧೯೪೨ರ ಚಲೇಜಾವ್ ಚಳುವಳಿಯು ಹೈದರಾಬಾದ ಪ್ರಾಂತದ ೧೬ ಜಿಲ್ಲೆಗಳಲ್ಲಿ ನಡೆಯಲಿಲ್ಲ. ಆದರೆ ಅದು ಇಲ್ಲಿ ಭಾರಿ ಹೋರಾಟದೊಂದಿಗೆ ನಡೆಯಿತು. ಅದಕ್ಕೆ ಗೋಲ್ಡಾಣ ಚಳುವಳಿ ಎಂದು ಹೆಸರಿಟ್ಟರು.

ನಂತರ ೧೯೪೭ರಲ್ಲಿ ರಜಾಕಾರರನ್ನು ಎದುರಿಸಲು ಶಿಬಿರಗಳು ಸ್ಥಾಪಿಸಲ್ಪಟವು. ಇಲ್ಲಿ ರಕ್ತಸಿಕ್ತ ಹೋರಾಟ ನಡೆಯಿತು. ಮುಂದೆ ೧೯೪೭ ಸೆಪ್ಟೆಂಬರ್ ೧೩ರ ಮಧ್ಯರಾತ್ರಿ ಪೋಲಿಸ್ ಆಕ್ಷನ್( ಆಪರೇಶನ್ ಪೋಲೋ) ಎಂಬ ಸೈನಿಕ ಕಾರ್ಯಾಚರಣೆ ನಡೆದು ಸೆಪ್ಟೆಂಬರ್ ೧೭ಕ್ಕೆ ಸಂಜೆ ನಿಜಾಮನು ಶರಣಾದನು. ಭಾರತದಲ್ಲಿ ಹೈದರಾಬಾದ್ ಪ್ರಾಂತ ವಿಲೀನವಾಯಿತು. ರಾಯಚೂರಿನ ಈ ಹೋರಾಟವೇ ಕರ್ನಾಟಕ ಸಂಘ ಹೊತ್ತಿಸಿದ ಸ್ವಾತಂತ್ರ್ಯದ ಅಗ್ನಿದಿವ್ಯವೆಂದು ಸಂಕ್ಷಿಪ್ತವಾಗಿ ಬರೆಯಲಾಗಿದೆ.

ಅಮೃತ ಮಹೋತ್ಸವದ ಸಂದರ್ಭದಲ್ಲಿ ಬೆನ್ನ ಹಿಂದಿನ ಬೆಳಕಾದ ಈ ಹೋರಾಟವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟು, ಅಭಿವ್ಯಕ್ತಿ ಸ್ವರೂಪಕ್ಕೆ ಚಾಲನೆ ನೀಡಿ ಹೊಸ ಮಾರ್ಗ ಹಾಕಿ ಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್ ಹಾಗೂ ಅವರ ಸಿಬ್ಬಂದಿಯನ್ನು ಕೃತಜ್ಞತಾಪೂರ್ವಕವಾಗಿ ಅಭಿನಂದಿಸುತ್ತೇನೆ. ಸಂಪಾದಕರಿಗೂ, ಸಿಬ್ಬಂದಿಗೂ ಅಭಿನಂದನೆಗಳು.

**ರಾಮಣ್ಣಹವಳೆ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ ರಾಮಾಶಾಲಾ ಬಯಲು | ೧೫ |
| ಅಧ್ಯಾಯ–೧ | ೧೫ |
| ಅಧ್ಯಾಯ–೨ | |
| ರಾಮಾಶಾಲಾ ಬಯಲಿನಲ್ಲಿ ಕರ್ನಾಟಕ ಸಂಘ: ೧೯೨೮ | ೧೯ |
| ಅಧ್ಯಾಯ–೩ | |
| ವಂದೇ ಮಾತರಂ ಚಳುವಳಿ | ೨೪ |
| ಅಧ್ಯಾಯ–೪ | |
| ಚಲೇಜಾವ್ ಚಳುವಳಿ | ೨೮ |
| ಗೋಲ್ಡಾಣಾ ಘಟನೆಯಲ್ಲಿ ಭಾಗವಹಿಸಿ ಶಿಕ್ಷೆಗೆ ಒಳಗಾದ ವ್ಯಕ್ತಿಗಳು | ೩೨ |
| ಅಧ್ಯಾಯ–೫ | |
| ಭಾರತ ಸ್ವಾತಂತ್ರ್ಯ ಘೋಷಣೆ | ೪೩ |
| ಅಧ್ಯಾಯ–೬ | |
| ಭೂಗತ ಚಟುವಟಿಕೆಗಳು | ೫೩ |

ಅಧ್ಯಾಯ–೭

ಹೈದ್ರಾಬಾದ್ ಪ್ರಾಂತ ಭಾರತದಲ್ಲಿ ವಿಲೀನ ೫೭

ಆಧಾರ ಗ್ರಂಥಗಳು ೫೮

- ಅನುಬಂಧ
  ಛಾಯಾಚಿತ್ರಗಳು ೫೯
- ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೧


---

# ಸ್ವಾತಂತ್ರ್ಯ ಹೋರಾಟದಲ್ಲಿ ರಾಮಾಶಾಲಾ ಬಯಲು

## ಅಧ್ಯಾಯ–೧

ಯಾವುದೋ ಕ್ರಾಂತಿಗೆ ಹೋರಾಟಕ್ಕೆ ಅದಕ್ಕೊಂದು ಹಿನ್ನೆಲೆಯಾಗಿ ನೋವು, ಕಷ್ಟ, ಅಪಮಾನ ಹಾಗೂ ಧರ್ಮದ ಮೇಲೆ ಆಕ್ರಮಣ ನಡೆದಾಗ ಅಂತರ್ ಜ್ವಾಲೆಗಳು ಸಾಮಾಜಿಕರ ಬದುಕಿನಲ್ಲಿ ಮೂಡುತ್ತವೆ. ಪ್ರಾರಂಭದಲ್ಲಿ ಸಮಾನ ಮನಸ್ಕರೊಡನೆ ಚರ್ಚೆ, ವಿಚಾರ ಸಂವಹನಗಳು ನಡೆಯುತ್ತವೆ. ಆಗ ಕಷ್ಟ ಪರಿಹಾರದಲ್ಲಿ ಬಾಹ್ಯ ಅಂಶಗಳ ಪ್ರಚೋದನೆ ನಡೆದರೆ ಎಲ್ಲವೂ ಮಿಳಿತವಾಗಿ ಒಂದು ಹೋರಾಟದ ಪರಿಕಲ್ಪನೆ ರೂಪು ಧರಿಸುತ್ತದೆ. ಈ ಅವ್ಯಕ್ತ ನೋವಿಗೆ ಆವೇಶ, ಸಾಧಿಸುವ ಛಲ ಗುಂಪಿನ ಮನೋಭಾವದಲ್ಲಿ ಸ್ಥಾಯಿ ಸ್ವರೂಪ ಹೊಂದುತ್ತವೆ. ಆಗ ಅಗ್ನಿದಿವ್ಯ ಹೊತ್ತಲ್ಪಡುತ್ತದೆ. ಹೀಗೆಯೇ ಕ್ರಮ ಕ್ರಮವಾಗಿ ನಡೆದದ್ದನ್ನು ರಾಯಚೂರಿನ ಕರ್ನಾಟಕ ಸಂಘ ಅಥವಾ ರಾಮಶಾಲಾ ಬಯಲು ಹೇಳುತ್ತದೆ. ಅದನ್ನು ಸ್ವಾತಂತ್ರ್ಯದ ಮಾನಸ ಗಂಗೋತ್ರಿ ಎಂದರೂ ತಪ್ಪಾಗಲಾರದು.

೧೯೧೯ರ ಚಾರ್ಲಸ್ ಮಾಂಟಿಗೋ ಸುಧಾರಣೆಗಳು ಭಾರತದಲ್ಲಿ ಕಾಲಿಟ್ಟಾಗ ದೇಶೀಯ ರಾಜರುಗಳಿಗೆ ನುಂಗಲಾರದ ತುತ್ತಾಯಿತು. ಮುಖ್ಯಮಂತ್ರಿ ಆದಿಯಾಗಿ ಮಂತ್ರಿಮಂಡಲವನ್ನು ವಿಸರ್ಜಿಸಿ ಲೆಜೆಸ್ಲೇಟಿವ್ ಕೌನ್ಸಿಲ್ ಮುಖಾಂತರ ಅದರ ಅಧ್ಯಕ್ಷನನ್ನು ಆರಿಸಿ ಅವನ ಮುಖಾಂತರ ದೇಶೀಯ ರಾಜರು, ನಿಜಾಮರು ಆಡಳಿತ ನಡೆಸಬೇಕಿತ್ತು. ಅದರಂತೆ ಹೈದರಾಬಾದ್ ನಿಜಾಮನು ಮಂತ್ರಿಮಂಡಳ ವಿಸರ್ಜಿಸಿ, ಸರ್ ಇಮಾಮ್ ಅಲಿಯವರನ್ನು ಅಧ್ಯಕ್ಷನನ್ನಾಗಿ ಮಾಡಿ ತಾತ್ಕಾಲಿಕ ಕ್ರಮ ತೆಗೆದುಕೊಂಡು ಲೆಜಿಸ್ಲೇಟಿವ್ ಕೌನ್ಸಿಲ್

ರಚಿಸಲು ಅಧ್ಯಕ್ಷರಿಗೆ ಹೇಳುವ ಮೂಲಕ ನಾಟಕ ಹೂಡಿದನು. ಜನರ ಬೇಡಿಕೆಯಾಗಿದ್ದ ಜವಾಬ್ದಾರಿ ಆಡಳಿತ ನೀಡುವ ಕೌನ್ಸಿಲ್ ರಚಿಸಲಿಲ್ಲ. ಲೇಜಿಸ್ಲೇಟಿವ್ ಕೌನ್ಸಿಲ್ಲನ್ನು ವಿವಿಧ ಕಾರಣ ಮುಂದುಮಾಡಿ ಅವರನ್ನು ಬದಲಾಯಿಸುತ್ತ ತನ್ನ ನಿರಂಕುಶ ಆಡಳಿತ ಹೇರಹತ್ತಿದನು.

ಆಗ ವಕೀಲರು, ಬುದ್ಧಿಜೀವಿಗಳು, ರಾಜಕೀಯ ಆಸಕ್ತರು ಇದನ್ನು ವಿರೋಧಿಸಿ ಸಂಘ ಸಂಸ್ಥೆಗಳನ್ನು ಕಟ್ಟಿ ಬೇಡಿಕೆ ಇಟ್ಟರು. ಹೀಗೆ ರಾಜಕೀಯವಾಗಿ ಜನರಲ್ಲಿ ಒಂದು ರೀತಿಯ ಅಸಂತೋಷ ಮನೆಮಾಡಿತು. ಮೂರು ವರುಷಕ್ಕೊಮ್ಮೆ ಬರಗಾಲ, ಪ್ಲೇಗು, ಕಾಲರಾ ಇವು ಮೂರು ದುರ್ವಿಧಿಗಳಾಗಿ ಜನರನ್ನು ಬಹಳ ಸಂಕಟಕ್ಕೆ ನೂಕಿದ್ದವು. ಇವರ ಕಷ್ಟಗಳಿಗೆ ಯಾವುದೇ ಪರಿಹಾರವನ್ನು ನಿಜಾಮನು ನೀಡಲಿಲ್ಲ. ಅದರ ಬದಲಾಗಿ ಲೆವಿ ಹೇರಿದನು. 'ನಜರಾನಾ ಅದಾ' ಎಂಬ ಕಾಣಿಕೆಯನ್ನು ನಿಜಾಮನ ಭೇಟಿಗೆ ನೀಡಬೇಕಾಯಿತು. ಮೌಲ್ವಿಗಳು ಮತಾಂತರಗಳನ್ನು ಹೆಚ್ಚಿಸಿದರು. ವಿಶೇಷವಾಗಿ ಹರಿಜನ ಕೇರಿಯನ್ನು, ಬಡವರನ್ನು ಗುರಿಮಾಡಿಕೊಂಡಿದ್ದರು.

ರಾಯಚೂರಿನ ಅಸ್ಕಿಹಾಳ ಜನರ ಮತಾಂತರ ಜನರ ದಿಕ್ಕನ್ನೇ ತಪ್ಪಿಸಿತು. ಅದನ್ನು ಆರ್ಯಸಮಾಜ ತಡೆಗಟ್ಟಿ ಅವರನ್ನು ಆರ್ಯಸಮಾಜಕ್ಕೆ ಮರು ಮತಾಂತರ ನಡೆದಿರುವುದು ಐತಿಹಾಸಿಕ ದಾಖಲೆ. ಜನರ ಸಾಕ್ಷರತೆ ಶೇಕಡಾ ೭ ರಿಂದ ೯ರ ಮಧ್ಯೆ ತೂಗಾಡುತ್ತಿತ್ತು. ಹೆಣ್ಣುಮಕ್ಕಳ ಶಿಕ್ಷಣವಂತೂ ಅವಿಭಜಿತ ರಾಯಚೂರು ಜಿಲ್ಲೆಯಲ್ಲಿ ಕೇವಲ ೦.೦೪ ಇತ್ತೆಂಬುದು ರಾಯಚೂರು ಜಿಲ್ಲಾ ಗೆಜೆಟಿಯರ್ ಹೇಳುತ್ತದೆ.

ಹೀಗೆ ಈ ಜಿಲ್ಲೆಯು ಶೋಷಣೆಗೆ ಒಳಪಟ್ಟು ಜನರು ಒಳಒಳಗೆ ಕುದಿಯುತ್ತಿದ್ದರು ಬಿಸಿಯುಸಿರು ಬಿಡುತ್ತಿದ್ದರು. ಕರ್ಮಸಿದ್ಧಾಂತಕ್ಕೆ ಅಂಟಿಕೊಂಡು ಪೂರ್ವಾರ್ಜಿತ ಕರ್ಮವೆಂದು ಅನುಭವಿಸುತ್ತಿದ್ದರು.

### 'ಚರಖಾ ಚಲಾಯೇಂಗೆ ಸ್ವರಾಜ್ಯ ಲೇಂಗೆ' ಗಾಂಧೀಜಿ ಘೋಷಣೆ:

ಕ್ರಿ. ಶ. ೧೯೨೦ರ ಸೆಪ್ಟೆಂಬರ್ ೭ ರಂದು ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ವಿಶೇಷ ಅಧಿವೇಶನವನ್ನು ಕರೆದು ಸ್ವತಃ ಗಾಂಧೀಜಿಯವರೇ ಅಸಹಕಾರ ಚಳುವಳಿಯ ಗೊತ್ತುವಳಿಯನ್ನು ಮಂಡಿಸಿದರು. ಅದರಲ್ಲಿ ಎರಡು ಪ್ರಮುಖ ಅಂಶಗಳಿದ್ದು ಆಂಗ್ಲ ಸರ್ಕಾರಕ್ಕೆ ಅಸಹಕಾರವನ್ನು ಹೇಗೆ ತೋರಿಸಬೇಕೆಂಬ



ನಿರ್ದೇಶನಗಳಿದ್ದವು. ಪ್ರಮುಖವಾಗಿ ಸರ್ಕಾರ ನೀಡಿರುವ ಬಿರುದು–ಬಾವಲಿಗಳನ್ನು ತ್ಯಜಿಸುವುದು. ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸುವುದು. ಮೆಸೊಪೋಟಮಿಯಾಕ್ಕೆ ಸರ್ಕಾರವು ಭರ್ತಿ ಮಾಡುತ್ತಿರುವ ಸೈನಿಕ ಅಥವಾ ಕೂಲಿಸ್ಥಾನಗಳಿಗೆ ಯಾರು ಹೋಗುವಂತಿಲ್ಲ. ವಿದೇಶಿ ವಸ್ತುಗಳಿಗೆ ಬಹಿಷ್ಕಾರ ಇತ್ಯಾದಿ. ಯಾವಾಗ ವಿದೇಶಿ ವಸ್ತು ಬಹಿಷ್ಕಾರ ಮಾಡುವ ಚಳುವಳಿ ಪ್ರಾರಂಭವಾಯಿತೋ ಆಗ ಖಾದಿ ಬಟ್ಟೆಗೆ ವಿಶೇಷ ಸ್ಥಾನಮಾನ ಬಂದಿತು. ಕಾಂಗ್ರೆಸ್ಸಿಗರೆಲ್ಲರೂ ಖಾದಿ ಧರಿಸುತ್ತಿದ್ದರು. ಮುಂದೆ ಯಾವುದೆ ಪಕ್ಷದವರಾದರೂ ಸಹ ದೇಶಸೇವೆಗೆ ಕಟಿಬದ್ಧರಾದವರು ಖಾದಿ ಧರಿಸಹತ್ತಿದರು.

ಗಾಂಧೀಜಿ ಆಗ "ಚರಕಾ ಚಲಾಯೇಂಗೆ ಸ್ವರಾಜ್ಯ ಲೇಂಗೆ" ಘೋಷಣೆ ಮಾಡಿ ಖಾದಿಗೂ ಸ್ವರಾಜ್ಯಕ್ಕೂ ಒಂದು ಸಂಬಂಧವನ್ನು ಕಲ್ಪಿಸಿದರು. ೧೯೨೫ ರಲ್ಲಿ ಚರಕಾ ಸಂಘಕ್ಕೆ ಗಾಂಧೀಜಿಯವರು ಅಧ್ಯಕ್ಷರಾಗಿದ್ದುದು ಅದರ ವಿಶೇಷ. ಕರ್ನಾಟಕದಲ್ಲಿಯೂ ಇದೇ ಇಸ್ವಿಯಲ್ಲಿ ಚರಕಾ ಸಂಘ ಪ್ರಾರಂಭವಾಯಿತು.

### ಗಾಂಧೀಜಿ ರಾಯಚೂರಿಗೆ : ಫರ್‌ಕ್ಯಾಪ್ ಎಸೆದ ರಾ. ಗು. ಜೋಷಿ–೧೯೨೦

ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸಿದ ಈ ಸಮಯದಲ್ಲಿ ಗಾಂಧೀಜಿಯವರು ಮದ್ರಾಸಿನಿಂದ ಮುಂಬೈಗೆ ಪ್ರಯಾಣ ಹೊರಟಿದ್ದರು. ಗಾಂಧಿ ದರ್ಶನಕ್ಕೆ ರೈಲ್ವೇ ನಿಲ್ದಾಣದಲ್ಲಿ ಜನರ ಮಹಾಪೂರವೇ ಸೇರಿತ್ತು. ಆಗ ರಾಯಚೂರಿನ ರಾ. ಗು. ಜೋಷಿಯವರು ವಿದ್ಯಾರ್ಥಿಯಾಗಿದ್ದರು. ಅವರು ದೊಡ್ಡ ವೀರಣ್ಣ ಮಾಸ್ತರ ಕೂಡಿ ಹೋಗಿದ್ದರು. ಜನರು ತಮ್ಮ ಮೈಮೇಲಿನ ಪರದೇಶಿ ಬಟ್ಟೆಗಳನ್ನು ಗಾಂಧಿ ಕುಳಿತ ಡಬ್ಬಿಯಲ್ಲಿ ಎಸೆದು ಜೈಕಾರ ಹಾಕುತ್ತಿದ್ದರು. ಇದನ್ನು ನೋಡಿದ ರಾ. ಗು. ಜೋಷಿಯವರು ವಿದೇಶಿ ಫರ್‌ಕ್ಯಾಪನ್ನು ಡಬ್ಬಿಯಲ್ಲಿ ಎಸೆದು ಗಾಂಧೀಜಿಗೆ ಪ್ರಣಾಮ ಸಲ್ಲಿಸಿ ಅಂದಿನಿಂದ ಖಾದಿಧಾರಿಗಳಾದರು. ರಾ. ಗು. ಜೋಷಿ, ಈರಣ್ಣ ಮಾಸ್ತರ ತಿರ್‌ಪುರದಿಂದ (ತಮಿಳುನಾಡು) ಖಾದಿ ತರಿಸಿಕೊಂಡು ಜನರಿಗೆ ಮಾರಾಟ ಮಾಡಿದರಂತೆ. ಆಗ ಗುಡಿಹಾಳ ಹನುಮಂತರಾಯರು ಖಾದಿ ಪ್ರಸಾರವನ್ನು ತಮ್ಮ ಜೀವನದ ಗುರಿಯಾಗಿ ಇಟ್ಟುಕೊಂಡರು.

೧೯೩೫ರಲ್ಲಿ ರಾ. ಗು. ಜೋಷಿಯವರು ಪ್ರಥಮ ಖಾದಿ ಕೇಂದ್ರ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ವಿಜಾಪುರದಲ್ಲಿ ಇದ್ದ ನೂಲಿನ ಸಂಗ್ರಹವನ್ನು ಉಪಯೋಗಿಸಿ ರಾಯಚೂರು ಜಿಲ್ಲೆಯ ದಿನ್ನಿ, ರಾಜೊಳ್ಳಿ, ಐಜಿ, ಎಕ್ಲಾಸಪುರ, ತಾವರೆಗೆರೆ, ಮೇಣೆದಾಳ, ಕನಕಗಿರಿಗಳಲ್ಲಿ ಖಾದಿ ಉತ್ಪಾದನಾ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಇದೆ ಸಂದರ್ಭದಲ್ಲಿ ಗುಡಿಹಾಳ ಹನುಮಂತರಾಯರು ಶಾರದಾ ಖಾದಿ ಭಂಡಾರವನ್ನು, ಈಲ್ಲೂರು ನರಸಯ್ಯನವರು ಶುದ್ಧ ಖಾದಿ ಕೇಂದ್ರವನ್ನು, ರಾ. ಗು. ಜೋಷಿಯವರು ರುಕ್ಮಿಣಿ ಭಂಡಾರ, ನೆಹರು ಸ್ಟೋರ್ಸ್ ತೆರೆದಿದ್ದರು. ಈ ಹಿಂದೆಯೆ ಪಂಡಿತ ತಾರಾನಾಥರು ೨೧.೦೭.೧೯೨೭ ರಂದು ದೀನಬಂಧು ಕಬೀರ ನಾಟಕವನ್ನು ಬೆಂಗಳೂರಿನ ಮೆಜೆಸ್ಟಿಕ್ ಥೇಟರನಲ್ಲಿ ಆಡಿದರಂತೆ. ಈ ನಾಟಕದಿಂದ ಬಂದ ಹಣವನ್ನು ಖಾದಿ ನಿಧಿಗೆ ನೀಡಲಾಯಿತು. ಹಿಂದೂ – ಮುಸ್ಲಿಂ ಏಕತೆಯ ಈ ನಾಟಕವನ್ನು ಗಾಂಧೀಜಿಯವರು ನೋಡಿ ಸಂತೋಷಪಟ್ಟರಂತೆ ಎಂಬುದು ದಾಖಲೆ. ಇಲ್ಲಿಯ ಪಾತ್ರಧಾರಿಗಳೆಲ್ಲ ಖಾದಿ ಬಟ್ಟೆ ತೊಟ್ಟು ಪಾತ್ರ ಮಾಡಿದರಂತೆ ಎಂದು ಎಂ. ಧ್ರುವನಾರಾಯಣರು (ಕರ್ನಾಟಕದಲ್ಲಿ ಖಾದಿ ಇತಿಹಾಸ) ದಾಖಲಿಸಿದ್ದಾರೆ. ಈ ನಾಟಕ ನೋಡಿದ ಮೈಸೂರು ಮಂತ್ರಿಮಂಡಲದ ಸದಸ್ಯರಾದ ಸಿ. ಬಾಲಸುಂದರಂ ಐಯ್ಯರ್‌ರವರು ಖಾದಿ ನಿಧಿಗೆ ರೂ. ೫೦೦/–ಗಳನ್ನು ಕೊಟ್ಟಿದ್ದಾಗಿ ದಾಖಲೆಯಾಗಿದೆ. ೧೪.೦೭.೧೯೨೭ರ 'ಯಂಗ್ ಇಂಡಿಯಾ'ದಲ್ಲಿ ಗಾಂಧೀಜಿ ಬರೆದಿದ್ದಾರೆ. ಗೋಪಾಲ ಪೇಟೆಯ ಚಿಕ್ಕರಾಣಿ ಲಲಿತಾದೇವಿ ೧೦ ಸಾವಿರ ರೂಪಾಯಿಯನ್ನು ನೀಡಿ, ಖಾದಿ ಕಾರ್ಯಕ್ಕೆ ತಮ್ಮ ಬಂಗಲೆಯನ್ನು ಬಿಟ್ಟುಕೊಟ್ಟಿದ್ದು ಖಾದಿಯ ದೊಡ್ಡ ಇತಿಹಾಸ.

ಹೀಗೆ ರಾಯಚೂರು ಜಿಲ್ಲೆಯಲ್ಲಿ ಬಿ. ಎಚ್. ಇನಾಮದಾರ, ರಾ. ಗು. ಜೋಷಿ, ಗಾಣದಾಳ ನಾರಾಯಣಪ್ಪ, ಅಡವಿರಾವ್ ಫಡ್ನವಿಸ್, ಎಲ್. ಕೆ. ಶರಾಫ್, ಹಮದರ್ದ ಹೈಸ್ಕೂಲ್ ದೊಡ್ಡವೀರಣ್ಣ ಮಾಸ್ತರ, ಅಳವಂಡಿ ಶಿವಮೂರ್ತಿಸ್ವಾಮಿ, ಜನಾರ್ದನರಾವ್ ದೇಸಾಯಿ, ಜಿ. ಕೆ. ಪ್ರಾಣೇಶಾಚಾರ್ಯ, ಗಂಗಾವತಿ ಆರ್. ವಿ. ಜಹಗೀರದಾರರು, ಕುಷ್ಟಗಿಯ ಪುಂಡಲೀಕಪ್ಪ ಜ್ಞಾನಮೋತೆ ಮೊದಲಾದವರು ರಾಯಚೂರು ಜಿಲ್ಲೆಯಲ್ಲಿ ಖಾದಿ ಪ್ರಚಾರವನ್ನು ಮಾಡಿದುದು ಖಾದಿ ಇತಿಹಾಸ ಸಾರಿ ಹೇಳುತ್ತಿದೆ.

❑

## ಅಧ್ಯಾಯ–೨

# ರಾಮಾಶಾಲಾ ಬಯಲಿನಲ್ಲಿ ಕರ್ನಾಟಕ ಸಂಘ : ೧೯೨೮

ಬಂಗಾಲದ ಸ್ವಾಮಿ ಭಾಸ್ಕರಾನಂದ ಸ್ವಾಮೀಜಿಯವರು ರಾಯಚೂರಿಗೆ ಬಂದಿದ್ದರು. ಅವರ ಪ್ರಯಾಣದಲ್ಲಿ ಮಳೆ ಬೆಳೆ ಇಲ್ಲದೆ ಜನರ ದುಃಖವನ್ನು ಕಣ್ಣಾರೆ ನೋಡಿದ್ದರು. (ಜಿಲ್ಲೆಯಲ್ಲಿ ಸರಾಸರಿ ಮಳೆ ಆದದ್ದು ಕೇವಲ ೧೧" (ಇಂಚು) (ಇಂಪಿರಿಯಲ್ ಗೆಜೆಟಿಯರ್ ಅಂಕಿ ಸಂಖ್ಯೆ). ಸರ್ಕಾರದ ಸಹಾಯವಿರಲಿಲ್ಲ. ನಿಜಾಮನ ಬೇಜವಾಬ್ದಾರಿ ಆಡಳಿತ ಕಂಡಿದ್ದರು. ಜಿಲ್ಲೆಯ ಬರಗಾಲದ ಉಪಯೋಗ ಪಡೆದು ದೊಡ್ಡ ಪ್ರಮಾಣದಲ್ಲಿ ಮತಾಂತರ ಜರುಗುತ್ತಿತ್ತು. ಇದನ್ನೆಲ್ಲಾ ನೋಡಿ, ಕೇಳಿ ಮನಸ್ಸು ಬೇಸರಗೊಂಡಿತ್ತು. ಆಗ ಅವರನ್ನು ರಾಮಾಶಾಲಾ ದೊಡ್ಡ ಮೈದಾನಕ್ಕೆ ಭಾಷಣಕ್ಕೆ ಆಮಂತ್ರಿಸಿದ್ದರು. ಆಗ ಅವರು "ಆರ್ಯ ಸಮಾಜದ ಬಗ್ಗೆ ಮಾತನಾಡುತ್ತ ನೀವು ಕನ್ನಡಿಗರು, ಇಷ್ಟು ದೊಡ್ಡ ಜಿಲ್ಲೆಯಲ್ಲಿ ಕೇವಲ ೨೧೮ ಶಾಲೆಗಳಿವೆ. ಅವು ಸಹ ಉರ್ದು ಭಾಷೆಯವು. ಕನ್ನಡವನ್ನು ಕಳೆದುಕೊಂಡಿದ್ದೀರಿ. ನಿಮ್ಮ ಜಿಲ್ಲೆಯಲ್ಲಿ ಮತಾಂತರ ಎಗ್ಗಿಲ್ಲದೆ ನಡೆದಿದೆ. ಇದಕ್ಕೆ ಮುಖ್ಯ ಕಾರಣ ನಿಮ್ಮದೇ ಪ್ರಭುತ್ವ ಇಲ್ಲ, ಅದನ್ನು ಪಡೆಯಲು ನಿಮ್ಮ ಸಂಘ ಕಟ್ಟಿರಿ" ಎಂಬ ಅವರ ಮಾತುಗಳಿಗೆ ಮಾರುಹೋದ, ಹಮದರ್ದ್ ಹೈಸ್ಕೂಲಿನ ದೊಡ್ಡ ವೀರಣ್ಣ ಮಾಸ್ತರ, ಅಡವಿರಾವ್ ಫಡ್ನವೀಸ್ (ಗಂಜ್ ವ್ಯಾಪಾರಿ), ಡಿ. ಮಾಣಿಕರಾವ್ (ವಕೀಲ), ರಾ. ಗು. ಜೋಷಿ, ಡಾ. ಬಿ. ಜಿ. ದೇಶಪಾಂಡೆ, ಆರ್. ಪಿ. ದೇಸಾಯಿ ಮೊದಲಾದ ತರುಣರು ೧೯೨೮ರ ರಾಮನವಮಿಯಂದು ಕರ್ನಾಟಕ ತರುಣ ಸಂಘ ಸ್ಥಾಪಿಸಿದರು. ತದನಂತರ ಅದು ಕರ್ನಾಟಕ ಸಂಘವಾಗಿ ಪ್ರಸಿದ್ಧಿ ಪಡೆಯಿತು. ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿ ಹಾಡಿತು. ಇಡೀ ಕರ್ನಾಟಕದಲ್ಲಿ ರಾಯಚೂರಿನ ಕರ್ನಾಟಕ ಸಂಘ ಅತ್ಯಂತ ಪುರಾತನ. ತದನಂತರ ೧೯೩೮ ರಲ್ಲಿ ಶಿವಮೊಗ್ಗದಲ್ಲಿ ಕರ್ನಾಟಕ

ಸಂಘ ಸ್ಥಾಪನೆಯಾಯಿತು. ರಂಗರಾವ್ ದೇಸಾಯಿ ಸ್ಥಳದಾನ ಮಾಡಿ ಕಟ್ಟಡ ಕಟ್ಟಲು ನೆರವಾದರು. ಸಂಘದ ಉದ್ದೇಶವು 'ಕನ್ನಡ' ಕಟ್ಟುವುದು ಅಲ್ಲದೇ ಅದಕ್ಕಾಗಿ ರಾಜಕೀಯ ಜಾಗೃತಿ ಮಾಡಿ ಜವಾಬ್ದಾರಿ ಸರ್ಕಾರವನ್ನು ಪಡೆಯುವುದು, ಕನ್ನಡ ಶಾಲೆ ಪ್ರಾರಂಭಿಸುವುದು, ಕನ್ನಡ ಲೈಬ್ರರಿ ಸ್ಥಾಪನೆ ಹಾಗೂ ದಸರಾ ಆಚರಣೆ ಹೀಗೆ ಅನೇಕ ಕಾರ್ಯಕ್ರಮ ಹಾಕಿಕೊಂಡು ಹಿರಿಯರನ್ನು ಕರೆಯಿಸುವುದು.

**ಕರ್ನಾಟಕ ಸಂಘ ನಡೆದುಬಂದ ಹಾದಿ:**

ಈ ಸಂಘವು ಇಡೀ ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ತಲಕಾವೇರಿ. ದಸರಾ ಹಬ್ಬವನ್ನು ನಾಡಹಬ್ಬವನ್ನಾಗಿ ಆಚರಿಸುತ್ತಾ ಪ್ರಸಿದ್ಧ ಸಾಹಿತಿಗಳಾದ ಕರ್ನಾಟಕ ಪಿತಾಮಹ ಆಲೂರು ವೆಂಕಟರಾಯರು, ಕನ್ನಡ ದಿಗ್ಗಜ ಡಿ. ವಿ. ಗುಂಡಪ್ಪನವರು, ಮಾಸ್ತಿ, ಬೇಂದ್ರೆ, ಗಾಂಧಿವಾದಿ ಸಿದ್ದವನಹಳ್ಳಿ ಕೃಷ್ಣಶರ್ಮ ಮೊದಲಾದ ಸಾಹಿತಿಗಳನ್ನು ಕರೆಯಿಸಿ ನಮ್ಮ ಕಲೆ, ಸಾಹಿತ್ಯ, ಸಂಸ್ಕೃತಿ, ಪರಿಚಯಿಸಿ ರಾಷ್ಟ್ರಭಕ್ತಿಯನ್ನು ಬಡಿದೆಬ್ಬಿಸಿದ ಪುಣ್ಯಭೂಮಿ ಇದು. ಈ ಸ್ಥಳದಲ್ಲಿಯೇ ೧೯೩೪ ರಲ್ಲಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಪಂಜೆ ಮಂಗೇಶರಾಯರು "ಕನ್ನಡದ ನಿಜಾರ್ಥವನ್ನು ಕನ್ನಡಿಗನಲ್ಲದ ನನ್ನ ಮನಸ್ಸಿನ ಆಳಕ್ಕೆ ಇಳಿಯುವಷ್ಟು ಜಾತಿಕನ್ನಡಿಗನ ಬುದ್ಧಿಗೆ ಸ್ಪಷ್ಟವಾಗದು . ಕಣ್ಣಿನ ಅರ್ಥ ಕಣ್ಣಿದ್ದವನಿಗಿಂತ ಇಲ್ಲದವನಿಗೆ ಚೆನ್ನಾಗಿ ತಿಳಿಯುತ್ತದೆ". ಒಂದು ಭಾಷೆ ಮೇಲ್ಮೊಗವಾಗಿದ್ದರೆ ಆ ಭಾಷೆಯ ಜನಗಳ ಬೆಳವಣಿಗೆ ಮುಂದುವರೆಯುತ್ತದೆಂದೂ, ಇಳಿಮೊಗವಾದರೆ ಜನಾಂಗವು ಕ್ಷಯಿಸುತ್ತದೆ ಎಂದೂ ಬಹುಮಟ್ಟಿಗೆ ಹೇಳಬಹುದು. ಕರ್ನಾಟಕ ಏಕೀಕರಣಕ್ಕೆ ಒತ್ತು ನೀಡಿ ಎಂದು ಹೇಳುತ್ತ ಪ್ರಾಂತೀಯ ಅರಸರು ಪ್ರೋತ್ಸಾಹ ನೀಡಬೇಕು. ಜನಕ್ಕೆ ಬೇಕಾದ ಅವಶ್ಯಕತೆಗಳನ್ನು ಆಡಳಿತವನ್ನು ನೀಡಬೇಕೆಂದು ಹೇಳಿ ಪರೋಕ್ಷವಾಗಿ ಜವಾಬ್ದಾರಿ ಸರ್ಕಾರಕ್ಕೆ ಮುನ್ನುಡಿ ಇಟ್ಟರು. ಇದು ಕನ್ನಡ ಸಾಹಿತ್ಯ ೨೦ನೆಯ ಮಹಾ ಸಮ್ಮೇಳನವಾಗಿತ್ತು. ಹತ್ತು ಸಹಸ್ರ ಜನರು ಸೇರಿದ್ದರು. (ಪುಟ ಸಂಖ್ಯೆ: ೪೧೭, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣಗಳು ಸಂಪುಟ ಒಂದು).

**ಕರ್ನಾಟಕ ಸಂಘದಿಂದ ನಿಜಾಮ ಕರ್ನಾಟಕ ಪರಿಷತ್ತು:**

ಸಾಹಿತಿ ಶ್ರೀರಂಗರ ಹಿರಿತನದಲ್ಲಿ ೧೯೩೪ ರಲ್ಲಿ ನಡೆದ ಅಖಿಲ



ಕರ್ನಾಟಕ ಸಾಹಿತ್ಯ ಸಮ್ಮೇಳನ ರಾಮಶಾಲೆ ಬಯಲಿನಲ್ಲಿ ನಡೆಯಿತು. ಆಗ ಇದನ್ನು ಜನ ಕರ್ನಾಟಕ ಸಂಘದ ಬಯಲು ಎಂದು ಕರೆಯಹತ್ತಿದರು. ಅಲ್ಲಿ ಒಂದು ಕನ್ನಡ ಶಾಲೆ. (ಅದು ೧೯೪೮ ರಂದು ಸರ್ಕಾರಿ ಮನ್ನಣೆ ಪಡೆದು ಶಾರದಾ ಸ್ಕೂಲು ಎಂದು ಹೆಸರಾಯಿತು.) ಆ ಸಮ್ಮೇಳನ ಮುಗಿದ ಬೆನ್ನಲ್ಲೇ ಅಂದಿನ ರಾತ್ರಿ ರಾಯಚೂರಿನ ಪಿ. ಕಿಷನರಾವ್ ಅವರ ಮನೆಯಲ್ಲಿ ಊಟದೊಂದಿಗೆ ಒಂದು ಸಣ್ಣ ಸಭೆ. ಹೈದರಾಬಾದ ಪ್ರಾಂತದ ಕನ್ನಡಿಗರನ್ನು ಒಗ್ಗೂಡಿಸಬೇಕು ಮತ್ತು ನಾಡು, ನುಡಿಗಾಗಿ ಕನ್ನಡ ಮಾಧ್ಯಮಕ್ಕಾಗಿ ಹೋರಾಟ ಮಾಡಬೇಕೆಂಬ ವಿಚಾರ ಚರ್ಚೆಯಾಗಿ ಅಂದೇ 'ನಿಜಾಮ ಕರ್ನಾಟಕ ಪರಿಷತ್ತು' ಸ್ಥಾಪಿಸಬೇಕೆಂದು ನಿರ್ಧಾರ ತೆಗೆದುಕೊಳ್ಳಲಾಯಿತು. ಅದರ ಅಧ್ಯಕ್ಷರಾಗಿ ಕಾರ್ವಾನ್ ಶ್ರೀನಿವಾಸರಾವ್, ಉಪಾಧ್ಯಕ್ಷರಾಗಿ ಪಿ. ಕಿಷನರಾವ್ ಕಾರ್ಯದರ್ಶಿಯಾಗಿ ಜನಾರ್ದನರಾವ್ ದೇಸಾಯಿ ಮತ್ತು ರಾಘವೇಂದ್ರರಾವ್ ಆಯ್ಕೆಯಾದರು. ಕನ್ನಡ ಬೆಳವಣಿಗೆ, ಹೈದರಾಬಾದ್ ಕರ್ನಾಟಕ ಏಕೀಕರಣದ ಜೊತೆಗೆ ಜವಾಬ್ದಾರಿ ಸರ್ಕಾರದ ಉದ್ದೇಶ ಹೊಂದಿದ್ದರು.

೨೨ನೆಯ ಫೆಬ್ರುವರಿ ೧೯೨೨ ರಂದು ಹೈದ್ರಾಬಾದಿನಲ್ಲಿ ರಾಯಚೂರಿನ ಶ್ರೀ ಪಿ. ಕಿಷನರಾವ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅನೇಕ ಗೊತ್ತುವಳಿಗಳನ್ನು ಸ್ವೀಕರಿಸಿತು. ಈ ಕನ್ನಡ ಸಂಘವು ರಾಜಕೀಯ ಸ್ವಾತಂತ್ರ್ಯದ ಉದ್ದೇಶವಿಟ್ಟುಕೊಂಡು ಆಂದೋಲನ ಪ್ರಾರಂಭಿಸಿತು. ಜವಾಬ್ದಾರಿ ಸರ್ಕಾರ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಬೇಡಿಕೆ ಮಂಡಿಸಿದರು.

೨೪ನೆಯ ಅಕ್ಟೋಬರ್ ೧೯೨೮ ರಂದು ಆಗತಾನೆ ಹುಟ್ಟಿದ ಕಾಂಗ್ರೆಸ್ಸಿನ ಮೇಲೆ ಸರ್ಕಾರ ನಿಷೇಧ ಹೇರಿತು. ನಿಜಾಮ ಕರ್ನಾಟಕ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಜನಾರ್ದನರಾವ್ ದೇಸಾಯಿಯವರು ಅಂದೇ ಸತ್ಯಾಗ್ರಹ ಕೈಗೊಂಡರು. ಅವರು ರಾಯಚೂರು ಜಿಲ್ಲೆಯವರೆಂಬುದು ಹೆಮ್ಮೆ. ಇವರು ಪ್ರತಿಭಾವಂತ ವಕೀಲರು, ರಾಷ್ಟ್ರೀಯವಾದಿಗಳು. ಬೀದರಿನಲ್ಲಿ ೧೯೪೦ ರಲ್ಲಿ ನಡೆದ ಎರಡನೆಯ ನಿಜಾಮ ಕರ್ನಾಟಕ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅಲ್ಲಿ ಸರ್ಕಾರವನ್ನು ಕಟುವಾಗಿ ಟೀಕಿಸಿ ನಾಗರಿಕ ಸ್ವಾತಂತ್ರ್ಯದ ಬೇಡಿಕೆ ಮಂಡಿಸಿದರು. ಕೆಲವು ದಿನಗಳಾದ ಮೇಲೆ ಬೀದರಿನ ಕನ್ನಡಿಗರ ೮೦ ಅಂಗಡಿಗಳು ಸುಡಲ್ಪಟ್ಟವು. ಕನ್ನಡ ವಕೀಲರೆಂದು ಪ್ರಸಿದ್ಧರಾದ ಬಸವಂತರಾಯರನ್ನು ಕೊಲ್ಲಲಾಯಿತು. ಈ ಹೃದಯ ವಿದ್ರಾವಕ ಘಟನೆ ಕೇಳಿ ಗಾಂಧೀಜಿಯವರು ಲಂಕೆಯಂತೆ

ಬೀದರ ಸುಟ್ಟಿದೆ ಎಂದು ವ್ಯಥೆಪಟ್ಟರು. ಈ ಸರ್ಕಾರದಲ್ಲಿ ಜನರು ಹಾಗೂ ಅವರ ಆಸ್ತಿ ಸುರಕ್ಷಿತವಲ್ಲವೆಂದು ಸಾರಿದರು. ಇಂತಹ ಘಟನೆ ಸಂಭವಿಸದಂತೆ ಜನರು ಜಾಗೃತರಾಗಿರಬೇಕೆಂದು ಕರೆ ನೀಡುತ್ತಾ, ರಕ್ಷಣೆ ನೀಡದಿದ್ದರೆ ಹಿಂದೂ ಹಾಗೂ ಮುಸ್ಲಿಂರಿಗೂ ಕೇಡು ಎಂದು ನಿಜಾಮರಿಗೆ ಎಚ್ಚರಿಕೆ ನೀಡಿದರು. (ಕನ್ನಡ ಕಾಲು ಶತಮಾನ, ಪುಟ ೧೦೯).

ಗಾಂಧೀಜಿಯ ಈ ಪತ್ರ ಹೈದ್ರಾಬಾದ್ ಸಂಸ್ಥಾನದ ಪರಿಸ್ಥಿತಿ ಸಾರಿತ್ತು. ಔರಾದ, ಷಹಜಾನಿ, ಆಳಂದದಲ್ಲಿ ಇದರ ಪ್ರತಿರೂಪದ ಘಟನೆಗಳು ನಡೆದಾಗ ನಿಜಾಮ ಕರ್ನಾಟಕ ಪರಿಷತ್ತು ನ್ಯಾಯಾಂಗ ವಿಚಾರಣೆ ಕೋರಿತು. ಆದರೆ ಈಡೇರಲಿಲ್ಲ. ಮಾರ್ಚ್ ೧೯೪೨ ರಲ್ಲಿ ಷೋರಾಪುರದಲ್ಲಿ ಪ್ರಸಿದ್ಧ ವಕೀಲ ಅಣ್ಣಾರಾವ ಗಣಮುಖಿ (ಸ್ವಾತಂತ್ರ್ಯದ ನಂತರ ಇವರು ಮೈಸೂರು ರಾಜ್ಯದ ಶಿಕ್ಷಣ ಮಂತ್ರಿಗಳಾಗಿದ್ದರು) ಅವರ ಅಧ್ಯಕ್ಷತೆಯಲ್ಲಿ ಸಂಪೂರ್ಣವಾಗಿ ಕನ್ನಡಿಗ ಜನರಿಂದಲೇ ಸಮ್ಮೇಳನ ವ್ಯವಸ್ಥಿತವಾಗಿ ನಡೆದು ಯಶಸ್ವಿಯಾಯಿತು.

ಎರಡನೆಯ ಅಕ್ಟೋಬರ್ ೧೯೪೨ ರಲ್ಲಿ ರಾಯಚೂರಿನ ಜಿ. ರಾಮಚಾರಿ ಅವರ ಮನೆಯಲ್ಲಿ ಸಭೆ ಜರುಗಿತು. ಅಂದು ಸಭೆಯಲ್ಲಿದ್ದವರು ಜಿ. ರಾಮಚಾರಿ ಜನಾರ್ದನರಾವ್ ದೇಸಾಯಿ, ಕೃಷ್ಣಾಚಾರಿ, ಶ್ರೀನಿವಾಸರಾವ್ ಮದರಕಲ್, ಜಯಾಚಾರ್ಯ, ಶ್ರೀನಿವಾಸರಾವ ಕುರುಡಿ. ಜಹಗೀರದಾರ, ಯಶವಂತರಾವ್, ಪಿ. ಕಿಷನರಾವ್, ಅಡವಿರಾವ್, ಡಾ. ದೇಶಪಾಂಡೆ, ರಾ. ಗು. ಜೋಷಿ, ನರೇಂದ್ರದತ್ತ ಶ್ರೀ ಖಂಡೆ ಕೇಶವರಾವ್, ಗಂಗಾವತಿ ತಿರುಮಲರಾವ್ ಮುಂತಾದವರು ಅಂದು ಸ್ವೀಕರಿಸಿದ ನಿರ್ಣಯಗಳು ಈ ರೀತಿ ಇವೆ.

(೧) ನಿಜಾಮನ ಜಿಲ್ಲಾ ಅಡ್ವೈಸರಿ ಕಮಿಟಿ ಉಪಯೋಗವಿಲ್ಲದ್ದು (೨) ಸರ್ಕಾರಕ್ಕೆ ಅಸಹಕಾರ ತೋರಬೇಕು. (೩) ಜವಾಬ್ದಾರಿ ಸರ್ಕಾರ ಸ್ಥಾಪನೆ. ಈ ರೀತಿ ಗಟ್ಟಿಯಾದ ನಿರ್ಧಾರ ತೆಗೆದುಕೊಂಡು ಜನರಿಂದ ಜವಾಬ್ದಾರಿ ಸರ್ಕಾರ ರಚನೆಗೆ ಬದ್ಧರಾದರು. ಅದೇ ದಿನ ಜನಾರ್ದನರಾವ್ ದೇಸಾಯಿ ಅವರ ಮನೆಯಲ್ಲಿ ಸಭೆ ಸೇರಿ ನಿಜಾಮ ಕರ್ನಾಟಕ ಪರಿಷತ್ತಿನ ಸದಸ್ಯತ್ವ ಹೆಚ್ಚಿಸಬೇಕು ಮತ್ತು ವಯಸ್ಕರ ಶಿಕ್ಷಣಕ್ಕಾಗಿ ದುಡಿಯಬೇಕು ಎಂದರು.

ಮೇ ೧೯೪೭ ರಲ್ಲಿ ರಾಯಚೂರಿನ ಕರ್ನಾಟಕ ಸಂಘದಲ್ಲಿ ನಾಲ್ಕನೆಯ



ನಿಜಾಮ ಕರ್ನಾಟಕ ಪರಿಷತ್ತು ಗುಲ್ಬರ್ಗದ ಕಿಕ್ಕೇರಿಯ ಹನುಮಂತರಾವ್ ವಕೀಲರ ಅಧ್ಯಕ್ಷತೆಯಲ್ಲಿ ಜರುಗಿತು. ಪರಿಷತ್ತಿನ ಸಂವಿಧಾನ ರಚನೆಯಲ್ಲಿಯ ದೋಷಗಳನ್ನು ಸರಿಪಡಿಸಲು ಒಂದು ಸಬ್ ಕಮಿಟಿಯು ರಚನೆಯಾಯಿತು. ರಾಜಕೀಯ ಗೊತ್ತುವಳಿ ಸ್ವೀಕರಿಸಿ ಹೋರಾಟಕ್ಕೆ ಅಣಿಯಾಗಬೇಕೆಂದರು. ಹೀಗೆ ಕನ್ನಡ ಚಳುವಳಿಗೆ ಕರ್ನಾಟಕ ಸಂಘವೇ ತಾಯಿ ಸಂಸ್ಥೆ. ಇಲ್ಲಿಂದಲೇ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ ಹೋರಾಟಗಳು ಪ್ರಾರಂಭವಾದದ್ದು ಎಂಬುದು ಸತ್ಯಸ್ಯ ಸತ್ಯ. ಈ ಕರ್ನಾಟಕ ಸಂಘವನ್ನು ರಾಯಚೂರಿನ ಮಾನಸ ಗಂಗೋತ್ರಿ ಎಂದೇ ಕರೆಯಬಹುದು.

❑

# ಅಧ್ಯಾಯ–೩
## ವಂದೇ ಮಾತರಂ ಚಳುವಳಿ

'ವಂದೇ ಮಾತರಂ' ಎಂದರೆ ತಾಯಿಗೆ ನಮಸ್ಕರಿಸುವೆನು. ಬಂಕಿಮ್ ಚಂದ್ರ ಚಟರ್ಜಿಯವರು ತಮ್ಮ 'ಆನಂದ ಮಠ' ಕಾದಂಬರಿಯಲ್ಲಿ ರಚಿಸಿದ ಗೀತೆಯಿದು. ಈ ಹಾಡು ದೇಶದ ವರ್ಣನೆಯನ್ನು ಮಾಡುವ ಹಾಡು.

ಇದು ಭಾರತದಲ್ಲಿ ನಡೆದ ಎಲ್ಲ ಚಳುವಳಿಗಳಿಗೆ ಜೀವಶಕ್ತಿ, ಪ್ರೇರಕ ಶಕ್ತಿ, ಧೀಃಶಕ್ತಿ. ಈ ದೇಶಭಕ್ತಿಗೀತೆ ರಾಷ್ಟ್ರೀಯ ಮಹಾಸಭೆಗಳಿಗೆ, ಕಾಂಗ್ರೆಸಿನ ಎಲ್ಲ ಅಧಿವೇಶನಗಳಿಗೆ ಪ್ರಾರ್ಥನೆಯ ಹಾಡಾಯಿತು. ಬರಬರುತ್ತ 'ವಂದೇ ಮಾತರಂ' ಎನ್ನುವುದು ಸಹ ರಾಷ್ಟ್ರೀಯ ಸ್ವಾತಂತ್ರ್ಯ ಬೇಡುವ ಹೆಗ್ಗುರುತಾದುದು ಈ ಹಾಡಿನ ಭಾವದೀಪ್ತಿ. ಇಂದಿಗೂ ದೇಶಭಕ್ತಿ ಚಿಮ್ಮಿಸುವ ಹಾಡಾಗಿ ಉಳಿದಿರುವುದು ಇದರ ಹಿರಿಮೆ. ಭಾರತೀಯ ಪರಂಪರೆಯಾಗಿರುವುದು ಇದರ ಇತಿಹಾಸ.

ನವಾಬ ಮೀರ್ ಉಸ್ಮಾನ ಅಲಿ ಸಿಂಹಾಸನವೇರಿ ೧೯೩೭ಕ್ಕೆ ೩೬ ವರುಷ. ಈ ರಜತ ಮಹೋತ್ಸವದ ನೆನಪಿಗಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು, ಹಬ್ಬದ ಉತ್ಸವಗಳನ್ನು ಹಮ್ಮಿಕೊಂಡಿತು. ಆಗ ವಂದೇ ಮಾತರಂ ಗೀತೆಯನ್ನು ರಾಷ್ಟ್ರದ್ರೋಹದ ಹಾಡೆಂದು ಪರಿಗಣಿಸಿ ಹಾಡುವುದನ್ನು ನಿಷೇಧಿಸಿದ್ದರಿಂದ ೧೯೩೮ರ ದಸರಾ ಹಬ್ಬದಲ್ಲಿ ಸ್ವಾಭಾವಿಕವಾಗಿ ವಿದ್ಯಾರ್ಥಿಗಳು ಬಂಡೆದ್ದರು. ಕಾಲೇಜ್ ಕ್ಯಾಂಪಸ್ ಪ್ರಾರ್ಥನಾ ಮಂದಿರದಲ್ಲಿ ಹಾಡಿದರು. ಇದರಿಂದ ಕುಪಿತರಾದ ಸಿಬ್ಬಂದಿ ಪ್ರಾರ್ಥನಾ ಮಂದಿರವನ್ನೇ ಮುಚ್ಚಿದರು. ಪ್ರಾರ್ಥನಾ ಮಂದಿರವನ್ನು ಮುಚ್ಚಿದರೇನಾಯಿತು? ಇಡೀ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಹಾಡು ಗುನುಗುನಿಸುತ್ತಿತ್ತು. ಆಗ ವಿಶ್ವವಿದ್ಯಾಲಯದ ಕ್ಯಾಂಪಸ್



ಮತ್ತು ಅದರ ಸುತ್ತುಮುತ್ತು ಈ ಹಾಡು ಹಾಡಬಾರದೆಂದು ವಿಶ್ವವಿದ್ಯಾಲಯ ಒಂದು ಸುತ್ತೋಲೆ ಹೊರಡಿಸಿತು.

ವಿದ್ಯಾರ್ಥಿಗಳೆಲ್ಲ ಸೇರಿ ವಂದೇ ಮಾತರಂ ಗೀತೆಯ ಮೇಲೆ ಹಾಕಿದ ನಿರ್ಬಂಧವನ್ನು ತೆಗೆಯಬೇಕೆಂದು ಮನವಿ ಮಾಡಿದರು. ಆದರೆ ಸರ್ಕಾರ ಕಿವುಡಾಯಿತು. ಇದಕ್ಕೆ ಪ್ರತಿಕೂಲವಾಗಿ ವಿಶ್ವವಿದ್ಯಾಲಯದ ಕುಲಪತಿಗಳು ಹಿಂದೂ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಕೋಣೆಗಳನ್ನು ೨೯ನೆಯ ನವೆಂಬರ್ ೧೯೩೮ರೊಳಗಾಗಿ ಖಾಲಿ ಮಾಡಬೇಕೆಂದು ಆದೇಶವಿತ್ತರು. ಈ ಕ್ರಮದಿಂದ ವಿದ್ಯಾರ್ಥಿಗಳು ವಂದೇ ಮಾತರಂ ಗೀತೆ ಹಾಡುವ ಚಳುವಳಿಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಂಡರು. ಅಂಗಿ ಮತ್ತು ಕೋಟಿನ ಮೇಲೆ ವಂದೇ ಮಾತರಂ ಗುಂಡಿಗಳನ್ನು ಇಟ್ಟುಕೊಂಡು, ನಿಷೇಧಾಜ್ಞೆಯನ್ನು ಬಲವಾಗಿ ಬಹಿರಂಗವಾಗಿ ಉಲ್ಲಂಘಿಸಿದರು.

ಈ ಚಳುವಳಿ ಹಾಗೂ ಮುಷ್ಕರಗಳು ೨೯ ನವೆಂಬರ್ ದಿಂದ ೧೦ನೆಯ ಡಿಸೆಂಬರ್ ವರೆಗೆ ಮುಂದುವರಿಯಿತು. ಈ ಪರಿಣಾಮವಾಗಿ ಬೇರೆ ಬೇರೆ ಜಿಲ್ಲೆಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಬಂದು ವಂದೇ ಮಾತರಂ ಚಳುವಳಿಯಲ್ಲಿ ಭಾಗವಹಿಸಿದರು. ಇದರಿಂದ ಕುಪಿತವಾದ ವಿಶ್ವವಿದ್ಯಾಲಯ ಡಿಸೆಂಬರ್ ೧೦ ರಂದು ಆದೇಶ ಹೊರಡಿಸಿ ಇಲ್ಲಿಯವರೆಗೆ ಚಳುವಳಿ ಮಾಡಿದ್ದಕ್ಕೆ ಕ್ಷಮೆ ಕೇಳಿ ತಮ್ಮ ತಮ್ಮ ಕಾಲೇಜುಗಳಿಗೆ ಹಿಂತಿರುಗಬೇಕೆಂದು ಆದೇಶಿಸಿತು. ಇದಕ್ಕೆ ತಪ್ಪಿದವರಿಗೆ ರೆಸ್ಟಿಕೇಟ್ ನೀಡಿ ಹೊರಗೆ ಹಾಕುವುದಾಗಿ ಗಂಭೀರವಾದ ಬೆದರಿಕೆ ಒಡ್ಡಿತು.

ಈ ಆದೇಶವನ್ನು ವಿದ್ಯಾರ್ಥಿಗಳು ಧಿಕ್ಕರಿಸಿದರು. ವಿಶ್ವವಿದ್ಯಾಲಯ ಈ ಚಳುವಳಿಯನ್ನು ಬಗ್ಗುಬಡಿಯಬೇಕೆಂದು ೩೫೦ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದಲೂ ೭೦ ವಿದ್ಯಾರ್ಥಿಗಳನ್ನು ಸಿಟಿ ಕಾಲೇಜಿನಿಂದಲೂ ೩೧೦ ವಿದ್ಯಾರ್ಥಿಗಳನ್ನು ಗುಲಬರ್ಗಾ ಕಾಲೇಜು ಹಾಗೂ ರಾಯಚೂರು ಹೈಸ್ಕೂಲಿನಿಂದಲೂ ತೆಗೆದು ಹಾಕಿದರು ಎಂದು ವಿ. ಹೆಚ್. ದೇಸಾಯಿಯವರು (ವಂದೇ ಮಾತರಂ) ಹೇಳುತ್ತಾರೆ. ಇದು ಬೀದರ, ನಾಂದೇಡ, ಪರಭಣಿ, ಔರಂಗಾಬಾದ್ ಜಿಲ್ಲೆಗಳಲ್ಲೂ ನಡೆಯಿತು. ಇದರಿಂದ ಸಿಟ್ಟಿಗೆದ್ದ ವಿದ್ಯಾರ್ಥಿ ಸಮುದಾಯ ಚಳುವಳಿಯನ್ನು ತೀವ್ರಗೊಳಿಸಿತು.

ಆಗ ವಿಶ್ವವಿದ್ಯಾಲಯ ತಾನು ಹೊರಹಾಕಿದ ವಿದ್ಯಾರ್ಥಿಗಳಿಗೆ ಭಾರತದಲ್ಲಿ ಎಲ್ಲೂ ಪ್ರವೇಶ ನೀಡದಂತೆ ಪತ್ರ ಬರೆದು ಕೋರಿತು. ಆದರೆ ನಾಗಪುರ, ಜಬ್ಬಲಪುರ ವಿಶ್ವವಿದ್ಯಾಲಯಗಳು ಇಂತಹ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಿದವು. ಹೀಗೆ ಹೊರ ನೂಕಲ್ಪಟ್ಟ ವಿದ್ಯಾರ್ಥಿಗಳಲ್ಲಿ ಪ್ರಮುಖರು ಜಗನ್ನಾಥರಾವ್ ಚಂಡರಕಿ, ಸರ್ದಾರ ಶರಣಗೌಡ, ರಾಯಚೂರಿನ ಅಳವಂಡಿ ಶಿವಮೂರ್ತಿ ಸ್ವಾಮಿ, ನಾರಾಯಣರಾವ್ ಕಾನಿಹಾಳ, ವೈ. ವಿರುಪಾಕ್ಷಪ್ಪ, ಆರ್.ಎಂ. ಗಂಗಾವತಿ, ಬಿ. ವಿ. ದೇಸಾಯಿ, ಜಯತೀರ್ಥ ರಾಜಪುರೋಹಿತ, ಕೊಪ್ಪಳದಲ್ಲಿ ಕಲಿಯುತ್ತಿದ್ದ ಇಟಗಿ ವಿರುಪಾಕ್ಷಯ್ಯ, ಕುಮಾರಯ್ಯ ಅಂದಾನಪ್ಪ ಕೊಲ್ಲೂರು, ವೀರಣ್ಣ ಮೆಣಸಿನಕಾಯಿ, ಬಂಗಾರ ಶೆಟ್ರು ಮೊದಲಾದವರನ್ನು ಹೆಸರಿಸಬಹುದು.

ಉಸ್ಮಾನಿಯ ವಿಶ್ವವಿದ್ಯಾಲಯ ಬಿಟ್ಟು ಹೊರಗಿನ ವಿಶ್ವವಿದ್ಯಾಲಯಕ್ಕೆ ಹೋದ ವಿದ್ಯಾರ್ಥಿಗಳಿಗೆ ದೇಶದ ಮಹಾನ್ ನಾಯಕರ ಪರಿಚಯವಾಯಿತು. ಅವರ ಭಾಷಣ ಕೇಳಿ ಮತ್ತಷ್ಟು ಉತ್ತೇಜನ ಪಡೆದರು. ಅನೇಕರು ಅಲ್ಲಿಯ ಪದವಿ ಶಿಕ್ಷಣ ಮುಗಿಸಿಕೊಂಡು ಮತ್ತೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು.

ಅನೇಕ ವಿದ್ಯಾರ್ಥಿಗಳು ಶಿಕ್ಷಣ ಮುಂದುವರೆಸಲಾಗದೆ ಚಳುವಳಿಗೆ ಇಳಿದರು. ಅಂತಹ ಸಾವಿರಾರು ವಿದ್ಯಾರ್ಥಿಗಳನ್ನು ಸರ್ಕಾರ ಬಂಧಿಸಿ ರಾಜ್ಯದ ಬೇರೆ ಬೇರೆ ಜೈಲುಗಳಿಗೆ ಕಳಿಸಿತು. ಗುಲ್ಬರ್ಗಾ ಜೈಲಿನಲ್ಲಿ ರಾಮಚಂದ್ರರಾವ್ ಎಂಬ ವಿದ್ಯಾರ್ಥಿ ವಂದೇ ಮಾತರಂ ಗೀತೆ ಹಾಡುತ್ತ ಇತರರನ್ನು ಉತ್ತೇಜಿಸುತ್ತಿದ್ದನು. ಅವನು ಯಾರೊಡನೆ ಮಾತನಾಡುವ ಮುನ್ನ ವಂದೇ ಮಾತರಂ ಎಂದೇ ಸಂಬೋಧಿಸಿ ಮಾತನಾಡುತ್ತಿದ್ದನು.

ಇದು ಜೈಲು ಅಧಿಕಾರಿಗಳಿಗೆ ಸಹಿಸದಾಯಿತು. ಅವನನ್ನು ಮನಸಾಪೂರ್ತಿ ಛಡಿಯಿಂದ ಹೊಡೆದರು. ಪ್ರತಿ ಛಡಿ ಏಟಿಗೂ ವಂದೇ ಮಾತರಂ ಎನ್ನುತ್ತಿದ್ದನು. ಮೂರ್ಛೆ ಬರುವವರೆಗೂ ರಕ್ತ ಹರಿದಾಗಲೂ ವಂದೇ ಮಾತಂ ಎನ್ನುತ್ತಲೇ ಇದ್ದನು. ಈ ಅಮಾನವೀಯ ಹಿಂಸೆಯನ್ನು ತಾಳಲಾರದೆ ವಂದೇ ಮಾತರಂ ಎನ್ನುತ್ತಲೆ ಸಾವನ್ನಪ್ಪಿದನು. ಅಷ್ಟು ಭಾವನಾತ್ಮಕವಾಗಿ ಜನರು ಅದನ್ನು ಸ್ವೀಕರಿಸಿದ್ದರು. ಯಲಬುರ್ಗ ತಾಲೂಕಿನ ಹಿರೇ ಬನ್ನಿಗೋಳದ ದಾಸಪ್ಪನನ್ನು ಇಲ್ಲಿ ನೆನೆಯದಿದ್ದರೆ ತಪ್ಪಾಗುತ್ತದೆ.



**ಹುತಾತ್ಮ ದಾಸಪ್ಪ**

ಹಿರೇ ಬನ್ನಿಗೋಳದ ದೇಸಾಯಿ ಮಗನಾದ ದಾಸಪ್ಪ ಹೈದ್ರಾಬಾದಿಗೆ ವಿದ್ಯಾಭ್ಯಾಸಕ್ಕಾಗಿ ಹೋಗಿದ್ದನು. ಅಲ್ಲಿ ಎಂ. ಎನ್. ರಾಯರ ಕ್ರಾಂತಿ ಪಥಕ್ಕೆ ಒಲಿದನು. ದೇಶವನ್ನು ಸ್ವತಂತ್ರಗೊಳಿಸಲು ಯುದ್ಧ ಅನಿವಾರ್ಯವೆಂದು ನಂಬಿದನು. ಅದಕ್ಕಾಗಿ ಸೇವಾದಳದ ಮುಖಾಂತರ ಪಂಜಾಬಿಗೆ ಹೋಗಿ ಲಾಠಿ ಕತ್ತಿವರಸೆ ಜೊತೆಗೆ ಕೈ ಬಾಂಬು ಸಿಸ್ಧಿಗೊಳಿಸುವಲ್ಲಿ ತರಬೇತಿ ಪಡೆದನು. ಹೈದ್ರಾಬಾದಿನ ವಂದೇ ಮಾತರಂ ಸತ್ಯಾಗ್ರಹದಲ್ಲಿ ಭಾಗಿಯಾಗಿ ದಸ್ತಗಿರಿಯಾದನು. ಉಸ್ಮಾನಿಯಾ ವಿಶ್ವವಿದ್ಯಾಲಯವು ಕಾಲೇಜಿನಿಂದ ಇವನನ್ನು ಕಿತ್ತುಹಾಕಿತು. ಪಂಜಾಬಿಗೆ ಹೋಗಿ ಪರೀಕ್ಷೆ ಕೊಟ್ಟು ಬಂದನು. ಹೈದರಾಬಾದಿನಲ್ಲಿ ೧೯೪೨ ರಲ್ಲಿ ಕ್ವಿಟ್ ಇಂಡಿಯಾದ ಆಂದೋಲನದಲ್ಲಿ ಭಾಗಿಯಾದನು. ಸರ್ಕಾರ ಇವನನ್ನು ಬಂಧಿಸಿತು. ಜೈಲಿನಲ್ಲಿ ಈ ತರುಣನಿಗೆ ಕುಂಡಿಯಲ್ಲಿ ಖಾರ ತುಂಬಿ ವಿಚಿತ್ರ ಚಿತ್ರಹಿಂಸೆಗಳನ್ನು ನೀಡಿತು. ಇವನು ಜೈಲಿನಲ್ಲಿಯೇ ವಂದೇ ಮಾತರಂ ಹೇಳುತ್ತಾ ಪ್ರಾಣ ತ್ಯಜಿಸಿ ಹುತಾತ್ಮನಾದನು. ಇಂತಹ ಘಟನೆಗಳು ಹೆಚ್ಚಿದವು. ಪ್ರಾಣ ಲೆಕ್ಕಿಸದೆ ಬದ್ಧತೆಗೆ ಒಳಗಾಗಿ ಅನೇಕರು ಜೀವ ತೆತ್ತರು.

❑

# ಅಧ್ಯಾಯ–೪
# ಚಲೇಜಾವ ಚಳುವಳಿ

ಹೈದ್ರಾಬಾದ್ ಸ್ವಾತಂತ್ರ್ಯದ ಹೋರಾಟದ ಬಗೆಗೆ ಖಚಿತ ನಿರ್ಧಾರಗಳನ್ನು ಹೊಂದಲು ರಾಜ್ಯ ಕಾಂಗ್ರೆಸ್ ನಾಯಕ ಸ್ವಾಮಿ ರಮಾನಂದ ತೀರ್ಥರು ಗಾಂಧೀಜಿಯವರನ್ನು ಕಾಣಲು ಗುಜರಾತಿನ ಸೇವಾಗ್ರಾಮಕ್ಕೆ ೧೯೪೨ ರಲ್ಲಿ ಭೇಟಿ ನೀಡಿದರು.

ಆಗ ಗಾಂಧೀಜಿಯವರು ಹೈದ್ರಾಬಾದಿನ ಹೋರಾಟದ ಸ್ಥಿತಿಗತಿಗಳನ್ನು, ಕಾಂಗ್ರೆಸ್ಸಿನ ಹೋರಾಟವನ್ನು ಶ್ರೀ ಸಾಮಾನ್ಯರ ನೈತಿಕ ಬೆಂಬಲದ ಬಗ್ಗೆ ಹಾಗೂ ಅವರು ಭಾಗವಹಿಸುವ ಬಗ್ಗೆ ತಿಳಿದುಕೊಂಡರು. ಸದ್ಯದ ಸ್ಫೋಟಕ ಸ್ಥಿತಿಯನ್ನು ಬಲವಾಗಿ ಕಾಯ್ದುಕೊಳ್ಳಿರಿ, ಮುಂದೆ ಕಾಂಗ್ರೆಸ್ ಅಧಿವೇಶನದಲ್ಲಿ ತಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿರಿ ಎಂದು ಆಶೀರ್ವಾದ ಮಾಡಿ ಕಳುಹಿಸಿದರು.

ಆಗಸ್ಟ್ ೧೯೪೨ ಮುಂಬಯಿ ಏ.ಐ.ಸಿ.ಸಿ. ಅಧಿವೇಶನ ದೇಶದ ಇತಿಹಾಸದಲ್ಲಿ ಮೈಲಿಗಲ್ಲು. ಆಂಗ್ಲರ ಆಳ್ವಿಕೆಯನ್ನು ಕಿತ್ತೊಗೆಯಲು ಅಸಹಕಾರ ಆಂದೋಲನ ಪ್ರಾರಂಭಿಸುವ ಮೂಲಕ 'ಮಾಡು ಇಲ್ಲವೆ ಮಡಿ' ಎಂದು ಕರೆ ನೀಡಿದರು. ಜನರು ಜಯ ಘೋಷದಿಂದ ೮ನೆಯ ಆಗಸ್ಟ್ ೧೯೪೨ ರಂದು ಈ ಐತಿಹಾಸಿಕ ನಿರ್ಣಯವನ್ನು ಉದ್ಘೋಷಿಸಿದರು. ರಮಾನಂದ ತೀರ್ಥರು ಹೇಳುವಂತೆ ಆ ಕ್ಷಣ ಇಡೀ ಭಾರತವೇ ಒಟ್ಟಾಗಿ ಎದ್ದು ನಿಂತು ಕೂಗಿದಂತೆ ಭಾಸವಾಗಿತ್ತು. ಜನರಲ್ಲಿ ಹೊಸ ಸಂಚಲನ ತುಂಬಿತ್ತು. ದೇಶದ ಎಲ್ಲ ವರ್ಗದ ಜನ, ಜಾತಿ ಭೇದ, ಧರ್ಮ, ಭಾಷೆ ಮರೆತು, ಪ್ರಾದೇಶಿಕತೆಯನ್ನು ಬದಿಗೊತ್ತಿ ವಂದೇ ಮಾತರಂ ಎನ್ನುತ್ತ ಜೈಹಿಂದ್ ಘೋಷಣೆಯನ್ನು ಕೂಗಹತ್ತಿದರು.



ಅವರೆಲ್ಲರ ಕಣ್ಣಂಚಿನಲ್ಲಿ ಕಾಣುತ್ತಿದ್ದುದು ಸ್ವತಂತ್ರ ಭಾರತದ ಏಕತೆಯ ಶಿಲ್ಪ, ಸಮಗ್ರತೆಯ ಸಂಕೇತ.

ಆಗಸ್ಟ್ ೭, ೧೯೪೨ ರಂದು ಸ್ವಾಮಿ ರಮಾನಂದರು ಗಾಂಧೀಜಿ ಯವರನ್ನು ಭೇಟಿಯಾದಾಗ 'ನಾಳೆ ತೆಗೆದುಕೊಳ್ಳುವ ನಿರ್ಣಯ ಕೇವಲ ಆಂಗ್ಲರ ಆಳ್ವಿಕೆಯ ಭಾರತಕ್ಕಲ್ಲ, ಎಲ್ಲಾ ಸಂಸ್ಥಾನಗಳಿಗೂ ಸಂಬಂಧಪಟ್ಟದ್ದು. ಈ ಹೋರಾಟ ಸ್ವಾತಂತ್ರ್ಯಕ್ಕಾಗಿ ನಡೆಯುವ ಜನತಾ ಆಂದೋಲನ ಎಂದಾಗ ಸ್ವಾಮೀಜಿಯವರಿಗೆ ಆನಂದವಾಯಿತು.

ಆಗಸ್ಟ್ ೯ ರಂದು ಇಡೀ ಭಾರತವೇ ಬಂಧನಗಳ ಸತ್ರವಾಯಿತು. ಗಾಂಧೀಜಿ ಮೊದಲ್ಗೊಂಡು ಹಿರಿಯರಾದ ನೆಹರು, ಪಟೇಲ, ಮೌಲಾನಾ ಅಬ್ದುಲ್ ಕಲಂ ಆಜಾದ್ ಮುಂತಾದ ನಾಯಕರೆಲ್ಲ ಬಂಧಿತರಾದರು. ಏ.ಐ.ಸಿ.ಸಿ. ಅಧಿವೇಶನ ಮುಗಿಸಿಕೊಂಡು ಬರುವಷ್ಟರಲ್ಲಿಯೇ ಅನೇಕರ ಬಂಧನಗಳನ್ನು ಕೇಳಿದ ಸ್ವಾಮೀಜಿಯವರು ತಮ್ಮ ಬಂಧನವಾಗಬಹುದೆಂದು ಊಹಿಸಿದರು. ಮುಂಬಯಿ ಸೊಲ್ಲಾಪುರದ ಮೂಲಕ ಹೊರಟ ಅವರು ರೈಲಿನಲ್ಲಿ ಕುಳಿತು ನವಾಬ ಮೀರ ಉಸ್ಮಾನ ಅಲಿ ಖಾನ್ ಬಹದ್ದೂರರವರಿಗೆ ಒಂದು ಪತ್ರ ಬರೆದು, ಅದನ್ನು ಕೊಡಲು ಡಾ. ಜಿ. ಎಸ್. ಮೇಲ್ಕೋಟೆಯವರೊಂದಿಗೆ ಕಳುಹಿಸಿದರು.

ಈ ಪತ್ರವು ನಾಗರಿಕ ಸ್ವಾತಂತ್ರ್ಯದ ಬೇಡಿಕೆಯಾಗಿತ್ತು. ಸ್ಟೇಟ್ ಕಾಂಗ್ರೆಸ್ಸಿನ ಮೇಲೆ ಹಾಕಿದ ನಿರ್ಬಂಧನೆ ತೆಗೆದುಹಾಕುವುದು ಸೇರಿ ಬಂಧಿತ ರಾಜಕೀಯ ಬಂಧಿಗಳ ಬಿಡುಗಡೆಗೆ ಕೋರಿತ್ತು.

## ಸ್ವಾಮಿ ರಮಾನಂದ ತೀರ್ಥರ ಬಂಧನ

ಸ್ವಾಮಿ ರಮಾನಂದ ತೀರ್ಥರು ಊಹಿಸಿದಂತೆ ಹೈದ್ರಾಬಾದ್ ನಾಮಪಲ್ಲಿ ಸ್ಟೇಷನನ್‌ಲ್ಲಿಯೇ ಅವರ ಬಂಧನವಾಯಿತು. ಆದರೆ ಅವರ ಪತ್ರ ಜಿ. ಎಸ್. ಮೇಲುಕೋಟೆಯವರಿಗೆ ಮುಟ್ಟಿತು. ಅದಕ್ಕೆ ಕಾಂಗ್ರೆಸ್ ಮುದ್ರೆ ಹಾಕಿ ಅಧ್ಯಕ್ಷರ ಪರವಾಗಿ ನವಾಬನಿಗೆ ತಲುಪಿಸಿದರು.

ಈ ಪತ್ರದ ಪರಿಣಾಮವಾಗಿ ಹೈದ್ರಾಬಾದ ಪ್ರಾಂತದಲ್ಲಿ ಸಾವಿರಾರು ಮುಖಂಡರನ್ನು, ಅಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರನ್ನು ಸರ್ಕಾರ ಬಂಧಿಸಿತು. ಅದರಲ್ಲಿ ಪ್ರಮುಖರು ಪಂಡಿತ ನರೇಂದ್ರ ಜಿ. ಡಾ. ಜಿ.ಎಸ್.

ಮೇಲ್ಕೋಟೆ, ವಿಮಲಾಬಾಯಿ, ಹೆಚ್. ಸಿ. ಹೆಡಾ, ಶ್ರೀಮತಿ ಪದ್ಮಜಾ ನಾಯ್ಡು, ಬಿ. ರಾಮಕೃಷ್ಣರಾವ್, ಜಿ. ರಾಮಾಚಾರ್ಯ, ಕೃಷ್ಣ ದುಭೆ, ವಿ. ಹೆಚ್. ದೇಸಾಯಿ ಮೊದಲಾದವರು.

**ಕಾಂಗ್ರೆಸ್ ಅಧಿವೇಶನಕ್ಕೆ ರಾಯಚೂರಿನವರು:**

ಈ ಕಾಂಗ್ರೆಸ್ ಅಧಿವೇಶನಕ್ಕೆ ಗಂಗನಗಾರ ನಾಗಣ್ಣ, ಕೊಂದೊಡ್ಡಿ ನರಸಪ್ಪ, ಬಾಯಿದೊಡ್ಡಿ ನರಸಪ್ಪ, ತಿಮ್ಮಾಪೂರಪೇಟೆ ದಸ್ತಗಿರಿ ಮೊದಲಾದವರು ಹೋಗಿದ್ದರು. ಇವರು ಗಾಂಧೀಜಿಯವರನ್ನು ಭೇಟಿಯಾಗಿ ಕಾಂಗ್ರೆಸ್ ಸೇರಿದರು. ಇವರನ್ನು ಮುಂಬಯಿಗೆ ಕರೆದುಕೊಂಡು ಹೋದ ವ್ಯಕ್ತಿ ಮುನ್ನಿ ಲಕನ್ಸಿ ಆಯಿಲ್ ಕಂಪನಿಯ ಸೇಠ್ ಹೀರ್ಗಿಭಾಯ್ ಗಾಂಧೀಜಿಯವರು ಆಪ್ ಬೈಠೋ, ಕಹಾಂ ಸೇ ಆಯೇ ಎಂದು ತಿಳಿದುಕೊಂಡು ಇವರು ನಿಜಾಮನ ವಿರುದ್ಧ ಹೋರಾಟ ಮಾಡುವ ವಿಚಾರ ಇಟ್ಟಾಗ ಗಾಂಧೀಜಿ ಮುಗುಳುನಗೆ ನಕ್ಕು ನೇಕ್ ಕ್ರಿಯಾ ಸೇ ಚಲ್ನಾ (ಪ್ರಾಮಾಣಿಕವಾಗಿ ಕ್ರಿಯಾತ್ಮಕವಾಗಿ ನಡೆಯಿರಿ), ಸತ್ಯವಾದುದನ್ನು ಮಾಡಿ ಜೈಲಿಗೆ ಹೋಗಿರಿ ಎಂದರಂತೆ. ಮುಂದೆ ಅಹಮದಾಬಾದಿನ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರೂಜಿಯವರ ಸಂಗಡ ಮಾತನಾಡಿ ನಿಜಾಮನ ವಿರುದ್ಧ ಹೋರಾಟ ಮಾಡಲು ಅನುಮತಿ ಪಡೆದದ್ದುಂಟು. ಅಡವಿರಾವ ಫಡ್ನವೀಸ, ಜಿ. ಮದ್ದುರಾವ, ಜಿ. ರಾಮಾಚಾರ ಮೊದಲಾದವರು ಮುಂಬಯಿ ಅಧಿವೇಶನಕ್ಕೆ ಹೋಗಿದ್ದರು.

**ಚಲೇಜಾವ್ ಚಳುವಳಿ**

**ರಾಯಚೂರು ಜಿಲ್ಲೆಯ ೧೯೪೨ರ ಚಲೇಜಾವ್ ಚಳುವಳಿ**

**ಗೋಲ್‌ತಾಣಾ: (೨೭ ಅಬಾನ್ ೧೩೫೧ ಫಸಲಿ):**

೧೯೪೨ರ ಚಳುವಳಿ ಹೈದರಾಬಾದ ಪ್ರಾಂತದಲ್ಲಿ ವಿಶಿಷ್ಟ ರೂಪ ತಳೆದಿತ್ತು. ಹೈದ್ರಾಬಾದ್ ನಿಜಾಮನು ಆಂಗ್ಲರ ಅರಸೊತ್ತಿಗೆಯನ್ನು ಒಪ್ಪಿದ ಅಧೀನ ರಾಜ. ಆಂಗ್ಲರ ರೆಸಿಡೆಂಟನು ಇಲ್ಲಿನ ಆಡಳಿತವನ್ನು ನೋಡಿಕೊಳ್ಳಲು ನಿಯುಕ್ತನಾದವನು. ನಿಜಾಮರ ಚಲನ ವಲನ ಹಾಗೂ ಅವರ ರಾಜಕೀಯ ಧೋರಣೆಗಳನ್ನು ನಿಯಂತ್ರಿಸುವ ವಿಚಕ್ಷಕ ಶಕ್ತಿ. ಇವನನ್ನು ತೆಗೆದುಹಾಕಬೇಕೆಂಬುದು ಸತ್ಯಾಗ್ರಹಿಗಳ ಬೇಡಿಕೆ. ಅವನನ್ನು ತೆಗೆದರೆ ಆಂಗ್ಲ ಆಡಳಿತವನ್ನು ವಿರೋಧಿಸಿದಂತೆ, ಚಲೇಜಾವ ಚಳುವಳಿಯ ಮೂಲ ಆಶಯ ಆಂಗ್ಲರನ್ನು ದೇಶದಿಂದ ಹೊರದೂಡಬೇಕೆಂದಿತ್ತು. ಇದು ಅದಕ್ಕೆ ಪೂರಕವಾಗಿತ್ತು. ನಿಜಾಮನಿಗೆ ಇದು



ಬೇಕಾಗಿದ್ದರೂ ಚಳುವಳಿಗೆ ಪ್ರೋತ್ಸಾಹಿಸುವಂತಿಲ್ಲ. ಪ್ರೋತ್ಸಾಹಿಸಿದರೆ ಆಂಗ್ಲರ ಕೆಂಗಣ್ಣಿಗೆ ಗುರಿಯಾಗಬೇಕಾಗಿತ್ತು. ಈ ಕಾರಣದಿಂದ ಹೈದ್ರಾಬಾದ್ ಪ್ರಾಂತದಲ್ಲಿ ಚಲೇಜಾವ ಚಳುವಳಿಯನ್ನು ಹತ್ತಿಕ್ಕುವ ಕ್ರಿಯೆಗೆ ಬದ್ಧನಾದನು. ಇಂಗ್ಲಿಷರ ಆಡಳಿತದ ಕೃಪಾಪೋಷಿತನಾಗಿ ಅದರ ಪ್ರೀತಿಗೆ ಹೆಚ್ಚು ಪಾತ್ರನಾಗಲು ಬಯಸಿದನು.

ಇಡೀ ದೇಶದಲ್ಲಿ 'ಕ್ವಿಟ್ ಇಂಡಿಯಾ ಮೂವ್‌ಮೆಂಟ್' ನಡೆಯುತ್ತಿರುವಾಗ ಕಾಂಗ್ರೆಸ್ ಆಶಯದಂತೆ, ಮಹಾತ್ಮ ಗಾಂಧೀಜಿಯವರ ಆದೇಶದಂತೆ ಇಲ್ಲಿಯೂ ಚಳುವಳಿಗಳು ನಡೆದವು.

ಕರ್ನಾಟಕ ಸಂಘದ ಪಕ್ಕದಲ್ಲಿನ ರಾಮಶಾಲಾ ಬಯಲಿನಿಂದ ತ್ರಿರಂಗಿ ಧ್ವಜ ಹಿಡಿದು ನಾರಾಯಣಪ್ಪ ಗಾಣದಾಳ (ವಯಸ್ಸು: ೨೭) ಇವರ ಹಿರಿತನದಲ್ಲಿ ಸಾಗಿ, ಗೋಲ್ತಾಣದ ಬಯಲಿನಲ್ಲಿ ಭಾಷಣ ಮಾಡಿ, ಇವರು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸುವ ಸತ್ಯಾಗ್ರಹ ಇದಾಗಿತ್ತು. ಈ ಯೋಜನೆಯನ್ನು ಅಂದಿನ ಪ್ರಸಿದ್ಧ ಡಾ. ಭಗೀರಥರಾವ್ (ವಯಸ್ಸು: ೬೦) ಹಾಗೂ ಅವರ ಗೆಳೆಯರಾದ ಅಡವಿರಾವ್ ಫಡ್ನವೀಸ್ ಮೊದಲಾದವರು ರೂಪಿಸಿದ್ದರು. ನಾರಾಯಣಪ್ಪ ಗಾಣದಾಳ, ಮಾಣಿಕರಾವ್, ಜಿ. ವೆಂಕೋಬರಾವ್ ತಂದೆ ರವಿರಾವ್, ರುಕ್ಮಾಜಿ ತಂದೆ ಮಾಧವರಾವ್, ಶ್ರೀನಿವಾಸರಾವ್, ಪಲ್ಲಕಿ ನರಸಣ್ಣ, ನರಸಪ್ಪ ಶೆಟ್ಟಿ, ಬ್ರೆಸ್ತವಾರಪೇಟೆಯ ಶಿವ ಮಾಣಿಕಪ್ಪ, ಗಾಜಗಾರಪೇಟೆಯ ರಾಮಚಾರಿ ತಂದೆ ಭೀಮಾಚಾರಿ ಮೊದಲಾದ ೧೭ ಜನ ಗಾಂಧೀ ಟೊಪ್ಪಿಗೆ, ಹೂ ಮಾಲೆಯಿಂದ ಪುರಸ್ಕೃತಗೊಂಡು, ಜನರಿಂದ ಬೀಳೊಂಡು, ಗೋಲ್ತಾಣ ರಸ್ತೆಯ ಮೂಲಕ ಸಾಥ್ ಕಛೇರಿಗೆ ಹೊರಟಿದ್ದರು.

ಈ ಸತ್ಯಾಗ್ರಹದ ಸುದ್ದಿ ಕಾಡ್ಗಿಚ್ಚಿನಂತೆ ಊರೆಲ್ಲ ವ್ಯಾಪಿಸಿತು. ಇವರನ್ನು ನೋಡಲು ಜನರು ತಂಡೋಪತಂಡವಾಗಿ ಸೇರಹತ್ತಿತ್ತು. ಈ ಮೆರವಣಿಗೆಯ ಹಿಂದೇ ಜನಜಂಗುಳಿಯೇ ಹೊರಟಿತು. ಮೊದಲೇ ನಿಗದಿತವಾದಂತೆ ಗೋಲ್ತಾಣಾದಲ್ಲಿ ಸತ್ಯಾಗ್ರಹಿಗಳೆಲ್ಲ ಸೇರಿ ವಂದೇ ಮಾತರಂ, ಹಿಂದೂ ಮುಸ್ಲಿಂ ಜಿಂದಾಬಾದ್, ಮಹಾತ್ಮ ಗಾಂಧೀಜಿ ಕೀ ಜೈ ಎನ್ನುತ್ತಾ ಘೋಷಣೆ ಕೂಗುತ್ತಿದ್ದರು. ಜನ ಸ್ತಬ್ದರಾದ ಮೇಲೆ ಗಾಣಧಾಳ ನಾರಾಯಣಪ್ಪನು ಬ್ರಿಟಿಷ್ ರೆಸಿಡೆಂಟನನ್ನು ಕಿತ್ತೊಗೆಯಿರಿ, ಬ್ರಿಟಿಷರನ್ನು ಈ ದೇಶದಿಂದ ಹೊಡೆದೋಡಿಸಿ ಎಂದು ಘೋಷಿಸಿ ಆಂಗ್ಲರ ಆಳ್ವಿಕೆ ವಿರುದ್ಧ ಭಾಷಣ ಮಾಡಿದನು. ಸತ್ಯಾಗ್ರಹಿಗಳು ಕರಪತ್ರ ಓದಿ

ಹಂಚಿದರು. ರೋಡಿನ ಮೇಲೆ ಕುಳಿತರು. ನಾಲ್ಕಾರು ಜನ ನಾರಾಯಣಪ್ಪನಿಗೆ ಹೂವಿನ ಹಾರ ಹಾಕಿದರು. ಸುಮಾರು ೨–೩ ಸಾವಿರ ಜನರು ಸೇರಿದ್ದರು. ಈ ಕಾರ್ಯಕ್ರಮದ ಸಂಪೂರ್ಣ ಉಸ್ತುವಾರಿ ವಹಿಸಿದ್ದ ಡಾ. ಭಗೀರಥರಾವ್ ದೇಶಪಾಂಡೆ ಅಲ್ಲಿದ್ದ ಖಾದಿ ಭಂಡಾರದ ಅಂಗಡಿಯಲ್ಲಿ ಕುಳಿತು ಎಲ್ಲವನ್ನು ನೋಡುತ್ತಿದ್ದರು. ಆವರು ಘೋಷಣೆ ಮಾಡುತ್ತಿದ್ದರೇ ಹೊರತು ಯಾವ ದಾಂಧಲೆಯಲ್ಲೂ ನಿರತರಾಗಿರಲಿಲ್ಲ. ಅಲ್ಲಿ ದೇಶಭಕ್ತಿ, ದೇಶಾಭಿಮಾನ ಹೆಪ್ಪುಗಟ್ಟಿದಂತೆ ಕಾಣುತ್ತಿತ್ತು. ಸತ್ಯಾಗ್ರಹಿಗಳನ್ನು ಸುತ್ತುವರೆದು ಕಾರ್ಯಕ್ರಮ ನೋಡುತ್ತಿದ್ದ ಜನರ ಮೇಲೆ ಪೊಲೀಸರು ತಕ್ಷಣ ಲಾಠಿ ಬೀಸುತ್ತ ಜನರನ್ನು ಚದುರಿಸುತ್ತ ೨೭ ಜನರನ್ನು ಬಂಧಿಸಿ, ದರದರನೆ ಎಳೆದೊಯ್ಯಹತ್ತಿದರು. ಸತ್ಯಾಗ್ರಹದಲ್ಲಿ ನೇರವಾಗಿ ಭಾಗವಹಿಸದಿದ್ದ ಕಾರ್ಯಕ್ರಮ ನೋಡುತ್ತಿದ್ದ ವಯಸ್ಸಾದ ಡಾ. ಭಗಿರಥರಾವ್ ದೇಶಪಾಂಡೆ ಅವರನ್ನು ಸಹ ಅಂಗಡಿಯಿಂದ ಹೊರಗೆಳೆದು ಸತ್ಯಾಗ್ರಹಿಗಳೊಡನೆ ಸೇರಿಸಿ ಹೊಡೆಯುತ್ತ ಬಡಿಯುತ್ತ ಸದರ್ ಬಜಾರ್ ಪೊಲೀಸ್ ಠಾಣೆಗೆ ದನಗಳಂತೆ ಹೊಡೆದುಕೊಂಡು ಹೊರಟರು. ಜನರು ಇದನ್ನು ನೋಡಿ ಪ್ರತಿಭಟಿಸಿದರು. ಲಾಠಿ ಚಾರ್ಜು ಆಯಿತು. ಡಾ. ಭಗೀರಥರಾವ್ ದೇಶಪಾಂಡೆ ಅವರನ್ನು ಎಳೆದುಕೊಂಡು ಹೋದದ್ದು, ಹೊಡೆದದ್ದು ಅಮಾನವೀಯವಾಗಿತ್ತು. ೨೭ ಜನರನ್ನು ಬಂಧಿಸಲಾಯಿತು. ಕೆಲದಿನಗಳಲ್ಲಿ ೧೦ ಜನರನ್ನು ಬಿಡುಗಡೆ ಮಾಡಿದರು. ಡಾ. ಭಗೀರಥರಾವರನ್ನು ಸೇರಿಸಿಕೊಂಡು ೧೭ ಜನರ ಮೇಲೆ ಚಾರ್ಜಶೀಟ್ ಹಾಕಲಾಯಿತು. ಮುಂದೆ ೩ ಜನರ ಮೇಲಿನ ಕೇಸನ್ನು ವಾಪಾಸು ಪಡೆಯಲಾಯಿತು ಉಳಿದವರನ್ನು ಶಿಕ್ಷಿಸಲಾಯಿತು.

ಒಂದು ತಿಂಗಳೊಪ್ಪತ್ತಿನಲ್ಲಿಯೇ ಜೈಲಿನಲ್ಲಿ ಡಾ. ಬಿ. ಜಿ. ದೇಶಪಾಂಡೆ ಯವರ ಆರೋಗ್ಯ ಕೆಟ್ಟಿತ್ತು. ಏನಾದರೂ ಅನಾಹುತವಾದರೆ ಜನರು ತಿರುಗಿಬಿದ್ದಾರೆಂದು ಭಯದಿಂದ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದರು.

**ಗೋಲ್ಮಾಣಾ ಘಟನೆಯಲ್ಲಿ ಭಾಗವಹಿಸಿ ಶೀಕ್ಷೆಗೆ ಒಳಗಾದ ವ್ಯಕ್ತಿಗಳು:**

ನಾರಾಯಣಪ್ಪ ತಂದೆ ದೇವೇಂದ್ರಪ್ಪ ಗಾಣಧಾಳ, ವಯಸ್ಸು: ೨೭ ವರ್ಷ, ಮೋಚಿವಾಡಿ, ರಾಯಚೂರು.

ಭಗೀರಥರಾವ ತಂದೆ ಗೋವಿಂದರಾವ ದೇಶಪಾಂಡೆ, ವಯಸ್ಸು: ೬೦ ವರ್ಷ, ವೈದ್ಯರು, (ಮನೆ ಸ್ಟೇಷನ್ ಬಜಾರ).



ಮಾಣಿಕರಾವ ಜಿ. ತಂದೆ ಸತ್ಯದೇವ, ಜಾತಿ ಆರ್ಯ, ವಯಸ್ಸು: ೨೮ ವರ್ಷ, ಶಿಕ್ಷಕರು, ಮಂಗಳವಾರಪೇಟೆ, ರಾಯಚೂರು.

ವೆಂಕೋಬರಾವ ತಂದೆ ರವಿರಾವ, ವಯಸ್ಸು: ೨೬ ವರ್ಷ, ಖಾದಿ ಭಂಡಾರ ಅಂಗಡಿ, ರಾಯಚೂರು.

ರುಕ್ಮಾಜಿ ತಂದೆ ಮಾಧವರಾವ, ಕ್ಷತ್ರಿಯ, ವಯಸ್ಸು: ೧೯ ವರ್ಷ, ಹಮದರ್ದ್ ಹೈಸ್ಕೂಲ ವಿದ್ಯಾರ್ಥಿ, ಮಂಗಳವಾರಪೇಟೆ, ರಾಯಚೂರು.

ಶ್ರೀನಿವಾಸರಾವ ತಂದೆ ಸಂಜೀವರಾವ, ಜಾತಿ ಬ್ರಾಹ್ಮಣ, ವಯಸ್ಸು: ೧೯ ವರ್ಷ, ರಾಯಚೂರು.

ಮಾಣಿಕರಾವ ತಂದೆ ಶ್ರೀನಿವಾಸರಾವ, ಜಾತಿ ಬ್ರಾಹ್ಮಣ, ಸೋಮವಾರಪೇಟೆ, ರಾಯಚೂರು.

ರಾಮಚಂದ್ರ ತಂದೆ ಜನಾರ್ದನ, ಜಾತಿ ಬ್ರಾಹ್ಮಣ, ಗಾಜಗಾರಪೇಟೆ, ರಾಯಚೂರು.

ರಾಮರಾವ ತಂದೆ ಹನುಮಂತರಾವ ಪತಂಗೆ, ಜಾತಿ ಭಾವಸಾರ ಕ್ಷತ್ರಿಯ, ಸೋಮವಾರಪೇಟೆ, ರಾಯಚೂರು.

ಶಂಕ್ರಪ್ಪ ದೇವಪ್ಪ, ವೈಶ್ಯರು, ಗಾಜಗಾರಪೇಟೆ.

ನರಸಪ್ಪ ಶೆಟ್ಟಿ ತಂದೆ ರಾಮಕೃಷ್ಣ, ಜಾತಿ ವೈಶ್ಯ, ಬ್ರಾಹ್ಮಣವಾಡಿ, ರಾಯಚೂರು.

ಪಲ್ಲಕ್ಕಿ ನರಸಣ್ಣ ತಂದೆ ನಾಗಪ್ಪ, ಜಾತಿ ಲಿಂಗಾಯತ, ಬೇರೂನಖಿಲ್ಲಾ, ರಾಯಚೂರು.

ಬಸವರಾಜಪ್ಪ ತಂದೆ ಬಂಡೆಪ್ಪ, ಜಾತಿ ಲಿಂಗಾಯತ, ಗಾಜಗಾರಪೇಟೆ, ರಾಯಚೂರು.

ಶಿವ ಮಾಣಿಕಪ್ಪ ತಂದೆ ಶಿವಪ್ಪ, ಜಾತಿ ವೈಶ್ಯ, ಬ್ರೆಸ್ತವಾರಪೇಟೆ, ರಾಯಚೂರು.

ಕೃಷ್ಣಯ್ಯ ತಂದೆ ನಾಗಯ್ಯ, ಜಾತಿ ವೈಶ್ಯ, ಬ್ರೆಸ್ತವಾರಪೇಟೆ, ರಾಯಚೂರು.

ರಾಮಾಚಾರಿ ತಂದೆ ಭೀಮಾಚಾರಿ, ಜಾತಿ ಬ್ರಾಹ್ಮಣ, ತಿಮ್ಮಾಪೂರಪೇಟೆ, ರಾಯಚೂರು.

ಮಾಣಿಕರಾವ ತಂದೆ ಶಿವಾಜಿರಾವ, ಜಾತಿ ಮರಾಠಾ, ರಾಯಚೂರು.

ಇವರೆಲ್ಲರಿಗೆ ೦೬ ತಿಂಗಳ ಶಿಕ್ಷೆ ಹಾಗೂ ೫೦ ರೂಪಾಯಿ ದಂಡ ವಿಧಿಸಲಾಯಿತು.

## ಕರ್ನಾಟಕ ಸಂಘದಿಂದ ರಾಯಚೂರು ಜಿಲ್ಲೆಯ ಲೆವಿ ವಿರುದ್ಧ ಆಂದೋಲನ

೧೯೪೫ ರ ಮಧ್ಯದಲ್ಲಿ ನಡೆದ ಲೆವಿ ವಿರುದ್ಧ ನಡೆದ ಆಂದೋಲನ ಸ್ವಾತಂತ್ರ್ಯ ಹೋರಾಟಕ್ಕೆ ಭದ್ರ ಬುನಾದಿ ಹಾಕಿತು. ಬಿಳಿಬಟ್ಟೆಯವರಿಗೆ ಸೀಮಿತವಾಗಿದ್ದ ಅಸಹಕಾರ ಆಂದೋಲನವಾಗಲಿ, ೧೯೪೨ರ ಚಲೇಜಾವ ಚಳುವಳಿಯಾಗಲಿ ಜನಸಾಮಾನ್ಯರನ್ನು ಆಕರ್ಷಿಸಿರಲಿಲ್ಲ. ಅದು ಕಲಿತ ಜನಾಂಗಕ್ಕೆ ಮೀಸಲು ಎನ್ನುವ ಸ್ಥಿತಿಯಲ್ಲಿತ್ತು. ಶ್ರೀಸಾಮಾನ್ಯರು ಸೌಲಭ್ಯಗಳಿಗಾಗಿ, ರಾಜಕೀಯ ಅಧಿಕಾರಕ್ಕಾಗಿ ಹೋರಾಟವೆಸಗಿದವರಲ್ಲ. ಕರ್ಮ ಸಿದ್ಧಾಂತವನ್ನು ಒಪ್ಪಿಕೊಂಡು ಪೂರ್ವಾರ್ಜಿತ ಕರ್ಮವೆಂದು ಕಷ್ಟ ಅನುಭವಿಸುತ್ತಿದ್ದರು. ಆದರೆ ಸತತ ಬರಗಾಲದ ಮಧ್ಯ ಜೀವನವನ್ನೇ ಪಣಕ್ಕಿಟ್ಟು ಬದುಕು ಸಾಗಿಸುತ್ತಿದ್ದಾಗ ಬೆಳೆ ಬರಲಿ ಬರದಿರಲಿ, ಭೂಮಿ ಬೀಳುಬಿದ್ದರೂ, ಮಳೆಯಾಗದಿದ್ದರೂ, ಬರಗಾಲ ಬಿದ್ದರೂ ಸರ್ಕಾರವು ಪ್ರತಿ ರೈತರಿಗೆ ಅವರವರ ಯೋಗ್ಯತಾನುಸಾರ ಯಾವುದೇ ವೈಜ್ಞಾನಿಕ ಲೆಕ್ಕಾಚಾರ ಮಾಡದೆ ಇಂತಿಷ್ಟು ಲೆವಿ ಕೊಡಬೇಕೆಂದು ಕಟ್ಟಳೆ ವಿಧಿಸಿತ್ತು. ಒಂದು ವಿಚಿತ್ರವೇನೆಂದರೆ, ಕೊಟ್ಟ ಲೆವಿ ಕಾಳಿಗೆ ಹಣವನ್ನು ಕೊಡುವುದು ಸಹ ಅಪರೂಪ. ಪೊಲೀಸರು, ಮಾಲಿಗೌಡ್ರು, ಪೊಲೀಸ್ ಪಾಟೀಲರು ರೈತರ ಮನೆಗೆ ಬಂದರೆ ಜನ ಹೌಹಾರುತ್ತಿದ್ದರು. ಪೊಲೀಸರು ಊರಲ್ಲಿ ಕಾಣಸಿಕೊಂಡರೆ ಲೆವಿ ಕಾಳಿಗಾಗಿ ಎಲ್ಲಿ ಒತ್ತಾಯಿಸುವರೋ ಎಂದು ಊರೇ ಬಿಡುತ್ತಿದ್ದರು. ಪರಿಸ್ಥಿತಿ ಇಷ್ಟು ಗಂಭೀರವಾಗಿತ್ತು. ಪೊಲೀಸರಿಗೆ ಕಂದಾಯ ಅಧಿಕಾರಿಗಳಿಗೆ ಕರುಣೆಯೇ ಇರುತ್ತಿರಲಿಲ್ಲ. ಲೆವಿ ಕೊಡದವರಿಗೆ ಬೆನ್ನು ಬಾಗಿಸಿ ನಿಲ್ಲಿಸಿ ಕಲ್ಲೇರುತ್ತಿದ್ದರು, ಅಪಮಾನಿಸುತ್ತಿದ್ದರು. ಮಾನಕ್ಕೆ ಹೆದರಿ ಅವರು ಕೊಡುವ ಚಿತ್ರಹಿಂಸೆಗೆ ಬೆದರಿ, ಕಾಳು ಕಡ್ಡಿ, ಎತ್ತು ಹೊಲಮಾರಿ, ಕೊನೆಗೆ ಇದ್ದ ಮನೆಯೂ ಮಾರಿ ಲೆವಿ ಕಟ್ಟುತ್ತಿದ್ದರು. ಅದೂ ಅಲ್ಲದೆ ಹಿಂದೂ ರೈತರು ಡಬಲ್ ಲೆವಿ ಕೊಡಬೇಕಾಗಿತ್ತು! ಹಿಂದೂ ಆಗಿ ಹುಟ್ಟಿದ್ದೇ ತಪ್ಪು ಎನ್ನುವ ಪರಿಸ್ಥಿತಿ! ರಾಯಚೂರು ಜಿಲ್ಲೆಯ ಕರ್ನಾಟಕ ಸಂಘದಲ್ಲಿ ಸಭೆ ಸೇರಿ



ಪ್ರಜಾಹಿತ ರೈತಸಂಘ ೧೯೪೫ ರಂದು ಸ್ಥಾಪಿಸಿಕೊಂಡು ಅಡವಿರಾವ್ ಫಡ್ನಾವೀಸ, ಗಾಣಧಾಳ ನಾರಾಯಣಪ್ಪ ಮತ್ತು ಬಿ. ಹೆಚ್. ಇನಾಂದಾರ, ರಾ. ಗು. ಜೋಷಿ ಮೊದಲಾದವರು ಹಳ್ಳಿ ಹಳ್ಳಿಗೆ ಹೋಗಿ ಸಂಚರಿಸಿ ಲೆವಿಯ ಬಗೆಗೆ, ಅದರ ತಾರತಮ್ಯದ ಬಗೆಗೆ, ಮಳೆ ಬೆಳೆ ಬಗೆಗೆ ವಿವರ ಸಂಗ್ರಹಿಸಿದರು. ಸರ್ಕಾರಕ್ಕೆ ವರದಿ ಒಪ್ಪಿಸಿ ಲೆವಿ ನಿಲ್ಲಿಸಲು ಮನವಿ ಮಾಡಿದರು. ಆದರೆ ಅದು ನಿಷ್ಪ್ರಯೋಜಕವಾಯಿತು. ಜನರ ದುಃಖಗಳಿಗೆ ಕೊನೆಯೇ ಇರಲಿಲ್ಲ. ಪ್ರಜಾಹಿತ ಸಂಘ ಸರ್ಕಾರಕ್ಕೆ ಸಲ್ಲಿಸಿದ ವರದಿಯ ಕೆಲವು ಮಹತ್ವದ ವಿವರಗಳನ್ನು ನೋಡೋಣ.

**ಸಾದಾಪುರ:** ಈ ಹಳ್ಳಿಯಲ್ಲಿ ಅಗಸರ ಹುಲಿಗೆಪ್ಪ ಮತ್ತು ಹುಡೆದ ಭೀಮಪ್ಪ ಇವರು ಲೆವಿಯನ್ನು ಕೊಡಲು ಸಾಧ್ಯವಿಲ್ಲದ ಪರಿಸ್ಥಿತಿ ಬಿಂಬಿಸಿದರೂ ಕೈಗಳನ್ನು ಬೆನ್ನ ಹಿಂದೆ ಕಟ್ಟಿ ಅವರನ್ನು ಗಾಣದೆತ್ತಿನಂತೆ ಸುತ್ತುವರೆಯಲು ಹಚ್ಚಿದರು.

**ನಾರಬಂಡಿ:** ಕುರುಬರ ಎಲ್ಲಪ್ಪ ಈ ಊರಿನಲ್ಲಿ ಗೌರವಾನ್ವಿತ ವ್ಯಕ್ತಿ. ಲೆವಿ ಕೊಡಲಿಲ್ಲವೆಂದು ಸುಳ್ಳು ಆಪಾದನೆ ಹೊರಿಸಿ ಇವರ ಕೈ ಬಿಗಿದು ಚಕ್ಕಡಿಯ ಹಿಂದೆ ಕಟ್ಟಿ ಚಕ್ಕಡಿ ಓಡಿಸಿಕೊಂಡು ಏಳುಬೀಳುಗಳೊಂದಿಗೆ ಸುಬೇದಾರ ಕ್ಯಾಂಪಿಗೆ ಕರೆದೊಯ್ದ ಸ್ಥಿತಿ ಹೃದಯವಿದ್ರಾವಕವಾಗಿತ್ತು. ಇಂತಹವರಿಗೆ ಹೀಗೆ ಮಾಡಿದ ಉದ್ದೇಶವು ಇವರನ್ನು ನೋಡಿ ಊರಿನವರೆಲ್ಲ ಭಯಬಿದ್ದು ಲೆವಿ ಕಟ್ಟುವಂತೆ ಮಾಡುವುದೇ ಆಗಿತ್ತು. ಅದು ಯಶಸ್ವಿಯಾಗಿತ್ತು.

**ಕವಿತಾಳ:** ಮಾರೆಮ್ಮ ಕವಿತಾಳ ಗೌರವಾನ್ವಿತ ಮನೆತನದ ಹೆಣ್ಣುಮಗಳು. ಈಕೆಗೆ ಯಾವುದೇ ಭೂಮಿ ಇರಲಿಲ್ಲ. ಲೆವಿ ಕೊಡುವ ಅಗತ್ಯತೆಯೂ ಇರಲಿಲ್ಲ. ಆದರೂ ಕಂದಾಯ ಅಧಿಕಾರಿಗಳು ಆಕೆಯನ್ನು ಅಪಮಾನಿಸಿದರು. ಆಕೆ ತನಗಾದ ಅವಮಾನಕ್ಕಾಗಿ ಹುಚ್ಚಿಯಾದುದು ಇತಿಹಾಸ. ಇದೇ ರೀತಿ ಹೊಲ ಇಲ್ಲದ ಹನುಮಕ್ಕ ಎಂಬುವಳ ಮನೆಗೆ ಹೋಗಿ ಲೆವಿಯ ನೆಪದಲ್ಲಿ ಸುಂದರಿಯಾದ ಆಕೆಯ ಮಗಳ ಮೇಲೆ ಬಲಾತ್ಕಾರ ಮಾಡಲು ಹೋದಾಗ ಆ ಹುಡುಗಿ ಓಡಿಹೋದಳು.

**ಕಾಡ್ಲೂರು:** ಕಲ್ಯಾಣಿ ಶ್ರೀನಿವಾಸಚಾರಿ ಹೊಲದಲ್ಲಿ ಕಣ ಮಾಡುತ್ತಿರುವಾಗ ಎಲ್ಲ ಕಾಳುಗಳನ್ನು ಲೆವಿ ಹೆಸರಲ್ಲಿ ಜಪ್ತಿ ಮಾಡಿದರು.

**ಹರವಿ:** ಕುರುಬರ ಅಮರಣ್ಣ ತನ್ನ ಕುಟುಂಬದ ಜೀವನ ನಿರ್ವಹಣೆಗೆ ಇಟ್ಟಿದ್ದ ಕಾಳುಗಳನ್ನು ಪೋಲೀಸರು, ಕಂದಾಯ ಅಧಿಕಾರಿಗಳು ಹೊತ್ತೊಯ್ದರು. ಪ್ರತಿಭಟಿಸಿದಾಗ ಆತನಿಗೆ ಹೊಡೆತಗಳನ್ನು ಕೊಟ್ಟರು. ಆತನಿಗೆ ಷಾಕಾಗಿ ಇದರಿಂದಲೇ ಸತ್ತ ಎಂದು ವರದಿಯಾಗಿದೆ. ಈಗಾಗಲೆ ನವಾಬನ ಕ್ರೂರ ನಡತೆಯಿಂದ ನಡೆದುಕೊಂಡ ಬಗೆಗೆ ಗಮನಿಸಿದ್ದಿರಿ. ರಾಯಚೂರಿನ ಕ್ರೂರಿ ತಹಶೀಲ್ದಾರರು ೧೯೪೬ ಅಕ್ಟೋಬರ್‌ನಲ್ಲಿ ಲೆವಿ ಸಂಗ್ರಹಕ್ಕೆ ಹಳ್ಳಿ ಹಳ್ಳಿಗೆ ಹೊರಟಿದ್ದರು. ಬಾಯಿದೊಡ್ಡಿ ಊರಿನವರು, ಸರ್ಕಾರಕ್ಕೆ ಲೆವಿ ವಿರುದ್ಧ ವರದಿ ಸಲ್ಲಿಸಿದ್ದ ಅಡವಿರಾವ್ ಫಡ್ನವೀಸ್ ಮಾತ್ರ ತಮಗೆ ರಕ್ಷಣೆ ಕೊಡುವರೆಂದು ಭಾವಿಸಿ ಅವರ ಹತ್ತಿರ ತೆರಳಿದರು. ತಹಶೀಲ್ದಾರರ ದಬ್ಬಾಳಿಕೆ, ಹಿಂಸೆ ಮೊದಲಾದವುಗಳ ವರದಿ ಮಾಡಿ ಜಿಲ್ಲಾಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಪತ್ರ ಬರೆದು ರೈತರಿಗೆ ರಕ್ಷಣೆ ನೀಡಿದರು.

## ಮಟಮಾರಿ ಗ್ರಾಮದಲ್ಲಿ ಕಂದಾಯ ಅಧಿಕಾರಿಗಳಿಗೆ ಒನಕೆ ಪೆಟ್ಟು

ಮಟಮಾರಿ ಗ್ರಾಮದಲ್ಲಿ ಒತ್ತಾಯಪೂರ್ವಕವಾಗಿ ಲೆವಿ ವಸೂಲು ಮಾಡಲು ಬಂದ ಕಂದಾಯ ಅಧಿಕಾರಿಗಳಿಗೆ ಅಮರಣ್ಣನವರು ಒನಕೆಯಿಂದ ಹೊಡೆದೋಡಿಸಿದರು. ಈ ಸಂದರ್ಭದಲ್ಲಿ ಊರಿಗೆ ಊರೇ ಒಂದಾಗಿತ್ತು. ಮುಂದೆ ಅಮರಣ್ಣನವರನ್ನು ಬಂಧಿಸಿ ಶಿಕ್ಷೆ ವಿಧಿಸಿದರು.

## ಬರಗಾಲದಿಂದ ಸಾವು

೧೯೪೭ರ ಮಾರ್ಚದಲ್ಲಿ ಭೀಕರ ಬರಗಾಲವಿತ್ತು. ರಾಯಚೂರು ಜಿಲ್ಲಾ ಸ್ಥಳದಿಂದ ಕಲ್ಲೂರು ಕೇವಲ ೧೮ ಮೈಲು ದೂರವಿದ್ದರೂ ಸರ್ಕಾರ ಬರಗಾಲದ ಬಗ್ಗೆ ಈ ಊರಿನಲ್ಲಿ ಯಾವುದು ಪರಿಹಾರ ಕ್ರಮ ಕೈಗೊಂಡಿರಲಿಲ್ಲ. ಅಲ್ಲಿ ಅಕ್ಕನಾಗಮ್ಮ ಮತ್ತು ಹೊಸೂರು ನರಸಪ್ಪ ಎಂಬುವರು ಅನ್ನ ಆಹಾರವಿಲ್ಲದೆ ಸತ್ತರು. ಈ ಬಗ್ಗೆ ಸತ್ಯಶೋಧನೆಗಾಗಿ ಗುಡಿಹಾಳ ಹನುಮಂತರಾಯರು ಮತ್ತು ಜಿ. ಮದ್ದುರಾವ್ ಕಲ್ಲೂರಿಗೆ ಹೊರಟು ಪರಿಸ್ಥಿತಿಯ ಸತ್ಯತೆ ಗಮನಿಸಿ ಬರಗಾಲ ಕಾಮಗಾರಿ ಕೈಗೊಳ್ಳಲು, ಗಂಜಿ ಕೇಂದ್ರ ತೆರೆಯಲು ಸರ್ಕಾರಕ್ಕೆ ಮನವಿ ಮಾಡಿದರು. ಆದರೆ ಆ ಪ್ರಯತ್ನ ನಿಷ್ಫಲವಾಯಿತು. ಕುರ್ಡಿ, ಕಪಗಲ್, ಸಂಕೇಶ್ವರ, ಬೊಮ್ಮನಾಳ, ಬೇವೂರ, ತುಪ್ಪದೂರು ಮುಂತಾದ ಕಡೆಗಳಲ್ಲಿ ಭಾರಿ ಬರಗಾಲವಿತ್ತು. ಪ್ರಜಾಹಿತ ಸಂಘದವರು ಪ್ರವಾಸ ಮಾಡಿ ಜನರಲ್ಲಿ



ಭರವಸೆ ತುಂಬುವ ಯತ್ನ ಮಾಡಿದರು. ಆದರೆ ಸರ್ಕಾರ ಯಾವುದೇ ಸಹಾಯಕ್ಕೆ ಬರಲಿಲ್ಲ.

## ಪ್ರಜಾಹಿತ ಸಂಘ ಸ್ಥಾಪನೆ:

ಬರಗಾಲ ಹಾಗೂ ಲೆವಿ ಬಗ್ಗೆ ವರದಿ ಮಾಡುತ್ತ ಸರ್ಕಾರದವನ್ನು ಎಚ್ಚರಿಸುತ್ತ ಜನರನ್ನು ಸಂಘಟಿಸುತ್ತಾ ಹೋದಂತೆ ಇವರನ್ನು ನಿಜಾಮ ಸರ್ಕಾರದ ಶತ್ರುಗಳೆಂದು ಬಗೆದರು. ಕಲೆಕ್ಟರನು ಇವರನ್ನು ಕರೆಯಿಸಿ ಗಡಿಪಾರು ಮಾಡುವ ಬೆದರಿಕೆ ಒಡ್ಡಿದನು. ಆಗ ಪ್ರಸಿದ್ಧನೂ, ಸರಕಾರದ ಮೇಲೆ ಪ್ರಭಾವ ಹೊಂದಿದ್ದವನೂ ಆಗಿದ್ದ ಜಿ. ರಾಮಚಾರ್ಯ ಅವರಿಗೆ ಸರ್ಕಾರದ ಸಪ್ಲೈ ಸೆಕ್ರೆಟರಿಯೇಟ್ ಅಧಿಕಾರಿ ಹೈದ್ರಾಬಾದ್ ದಕ್ಷಿಣ ಅವರು ಪ್ರಜಾಹಿತ ಸಂಘದ ಸದಸ್ಯರ ಮೇಲೆ ಆಪಾದನೆ ಮಾಡಿ ಪತ್ರ ಬರೆದನು. ಆ ಪತ್ರ ಈ ಕೆಳಗಿನಂತಿದೆ.

**LETTER**

No. 1659 P — Supply Secretariate
Strictly Private — Hyderbad Deccan
Dear G. Ramachari, — May 7th 1946

Kindly refer to your letter D/27, April 1946 addressed to the Honourable Revenue Member which he has passed to me for examination and reply.

On receipt of your recommendation that, the notices served by First Talukdar of Raichur on M/s Advirao, Ramachar Joshi and Narayanappa be with drawn, a report on their activities was obtained from the local police and Revenue authorities. In the light of the facts that, have come to the notices of the government, I am desired to say that, it is not considered possible for them to advice the Talukdar sahib to withdraw the notices.

Your friends are not only hindering procurement which is a serious offences, but are creating anti-Government feeling

amongst the Royats. They have set up a society known as "The Praja Hit Sangh" and collecting funds from cultivators for it by making them believe that, they will secure levy exemptions or concession for them. M/s Adavirao and Narayanappa were imprisoned in false 1352 for making seditious.

Under the Circumstances, I would request you to advice them to desist from such activities in the interest of the people and in their own interest as well.

Yours faithfully
Sd/-
(Raziuddin)

## ಸರ್ಕಾರಕ್ಕೆ ಬುದ್ಧಿ ಹೇಳಿದ ಜಿ. ರಾಮಾಚಾರ

ಸೆಕ್ರೆಟ್ರಿಯೇಟ್ ಅಧಿಕಾರಿ ರಿಜಿಯುದ್ದಿನ್ ಜಿ. ರಾಮಾಚಾರ್ಯರಿಗೆ ಪತ್ರ ಬರೆದು ತಾವು ಶಿಫಾರಸ್ಸು ಮಾಡಿದ ಅಡವಿರಾವ್, ರಾಮಾಚಾರ್ಯ ಜೋಷಿ, (ರಾ.ಗು. ಜೋಷಿ) ಗಾಣದಾಳ ನಾರಾಯಣಪ್ಪ ಅವರ ಮೇಲೆ ತಾಲೂಕುದಾರನು ಹೊರೆಸಿದ ಆಪಾದನೆಗಳನ್ನು ಹಿಂದಕ್ಕೆ ತೆಗೆಯಲು ಆಗುವುದಿಲ್ಲ. ಅದರ ಜೊತೆಗೆ ನಿಮ್ಮ ಸ್ನೇಹಿತರು ಲೆವಿ ವಿರುದ್ಧವಾಗಿದ್ದು, ಸರ್ಕಾರದ ವಿರುದ್ಧವಾಗಿ ಜನರಲ್ಲಿ ದುರ್ಭಾವ ಬೆಳೆಸುತ್ತಿದ್ದಾರೆಂದು ಹೇಳಿ, ಇಂತಹ ಕೃತ್ಯವೆಸಗಬಾರದೆಂದು ನಿಮ್ಮ ಸ್ನೇಹಿತರಿಗೆ ಹೇಳಿ ಎಂದಿದ್ದರು. ಅದಕ್ಕೆ ಜಿ. ರಾಮಚಾರ್ಯರು ದಿನಾಂಕ ೧೭ನೆಯ ೧೯೪೬ ರಂದು ಉತ್ತರ ಬರೆದರು. (ಸಂಕ್ಷಿಪ್ತ ರೂಪ) ನಿಮ್ಮ ಅಧಿಕಾರಿಗಳು ಪೂರ್ವ ಕಲ್ಪಿತ ದೋಷ ಹೊಂದಿದ್ದಾರೆ. ನಾನು ತಿಳಿದ ಮಟ್ಟಿಗೆ ಅವರು ಜನನಿಷ್ಠರು ಮತ್ತು ಪ್ರಾಮಾಣಿಕರು, ರೈತರ ಹಿತೈಷಿಗಳು. ಅವರು ಈ ಹಿಂದೆ ೨ನೆಯ ತಹಸಿಲ್ದಾರರ ಮೇಲೆ, ಮಾನವಿ ಲ್ಯಾಂಡ್ ರಿಕಾರ್ಡ್ ಅಧಿಕಾರಿ ಪೆಷ್ಕಾರರ ಬಗೆಗೆ ಸಾಕಷ್ಟು ಸಾಕ್ಷಿಗಳ ಮೂಲಕ ಲೆವಿ ವಸೂಲಾತಿಯಲ್ಲಿ ನಡೆದ ಅಕ್ರಮಗಳನ್ನು, ರೈತರ ಕಷ್ಟಗಳನ್ನು ಸಾಕ್ಷಿ ಸಹಿತ, ಗುಲ್ಬರ್ಗದ ಸುಬೇದಾರ ಸಾಹೇಬನ ಎದುರಿನಲ್ಲಿ ಮಂಡಿಸಿದರೂ ಅವು ಆಧಾರರಹಿತ ಎಂದು ಅವರು ಸಾರಿದ್ದಾರೆ. ಇದರ ಪರಿಣಾಮವಾಗಿ ಮಟಮಾರಿ ಜನರು ಗಿರ್ದಾವರ ಮತ್ತು ತಹಶೀಲ್ದಾರ ಕ್ಲರ್ಕ್‌ನ ಮೇಲೆ ಏರಿ ಹೋಗಿ ಲೆವಿ ಎತ್ತಿದ ಧಾನ್ಯಗಳನ್ನು ಒಯ್ದರು. ಅಡವಿರಾವ್ ಅವರು ಲೆವಿ ಸಂಗ್ರಹಿಸಬಾರದು ಹಾಗೂ ತನ್ನ ಮಾತನ್ನು ಕೇಳಿದ ವತನದಾರ ರೈತರಿಗೆ ೫೦೦ ರೂ. ಕೊಡುವುದಾಗಿ ಹೇಳಿದ್ದಾರೆ. ಹೀಗೆ ಸರ್ಕಾರದ ವಿರುದ್ಧ ರೈತರನ್ನು ಎತ್ತಿ ಕಟ್ಟುತ್ತಿದ್ದಾರೆಂದು ಆಪಾದಿಸಿರುವಿರಿ. ಕಂದಾಯ ಸದಸ್ಯರು ರಾಯಚೂರು ತಾಲ್ಲೂಕು ಸಂದರ್ಶಿಸಿದಾಗ ಉತ್ತಮ ಬೆಳೆ ಬಂದಿದ್ದನ್ನು ಕಂಡಿದ್ದಾರೆ. ಆದರೆ ಹಳ್ಳಿಗರು ಬೆಳೆ ಸರಿ ಬಂದಿಲ್ಲವೆಂದು ಹೇಳುತ್ತಾರೆ. ಇದಕ್ಕೆಲ್ಲ ಕಾರಣ ಜೋಷಿ, ಅಡವಿರಾವ್, ನಾರಾಯಣಪ್ಪ ಅವರ ಸುಳ್ಳುಗಳು ಮತ್ತು ಪ್ರತಿರೋಧವೇ ಕಾರಣವಾಗಿದೆ. ಆದಕಾರಣ ಈ ಜಂಟಲ್ಮನ್ನರ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ಅವರು ಈ ನಡತೆಯನ್ನು ಸುಧಾರಿಸಿಕೊಳ್ಳದಿದ್ದರೆ ಸರ್ಕಾರದ ಜವಾಬ್ದಾರಿ ಅಧಿಕಾರಿಗಳು ಮುಂದಿನ ಕ್ರಮಕ್ಕಾಗಿ ಇವರ ಆಪಾದನೆಗಳನ್ನು ಮಂಡಿಸುವರು. ಪ್ರಜಾಹಿತ ಸಂಘದ ಹೆಸರಿನಲ್ಲಿ ಲೆವಿ ಮಾಫ್ ಮಾಡಿಸಲಾಗುವುದು ಇಲ್ಲವೆ ಅದರಲ್ಲಿ ರಿಯಾಯತಿ ತೋರಿಸುತ್ತೇವೆಂದು ಜನರಿಂದ ಹಣ ವಸೂಲು ಮಾಡುತ್ತಿದ್ದಾರೆ ಎಂಬ ಆಪಾದನೆಗಳನ್ನು ನಾನು ಒಪ್ಪುತ್ತಿಲ್ಲ. ಏಪ್ರಿಲ್ ೧ ಅಥವಾ ೨ನೆಯ ವಾರದಲ್ಲಿ ಜರುಗಲಿರುವ ನ್ಯಾಷನಲ್ ವೀಕ್ ಸಮಾರಂಭಕ್ಕಾಗಿ ದೇಣಿಗೆ ಸಂಗ್ರಹ ಬಿಟ್ಟು ಇತರ ಯಾವುದೇ ಹಣವನ್ನು ಸಂಗ್ರಹಿಸುತ್ತಿಲ್ಲವೆಂದು ನನ್ನ ತಿಳುವಳಿಕೆಗೆ ಬಂದಿದೆ. ತಾವು ತಿಳಿಸಿದಂತೆ ಇವರ ಮೇಲೆ ಈ ಹಿಂದೆ ರಾಜಕೀಯ ಅಪರಾಧಗಳನ್ನು ಹೊರಿಸಲಾಗಿತ್ತು ಎಂಬುದು ನಿಜ. ಅದಕ್ಕಾಗಿ ಅವರಿಗೆ ಶಿಕ್ಷೆಯನ್ನು ಸಹ ವಿಧಿಸಲಾಗಿತ್ತು. ಆದರೆ ಸದ್ಯದ ಚಟುವಟಿಕೆಗಳನ್ನು ಅದೇ ಅನುಮಾನದಿಂದ ನೋಡಬೇಕಾಗಿಲ್ಲ. ಗುಲ್ಬರ್ಗದ ಸುಬೇದಾರ ಸಾಹೇಬನು, ಮಾನವಿ ತಹಶೀಲ್ದಾರ ಆಫೀಸ್‌ನ ಮೇಲೆ ಮಾಡಲಾದ ಆರೋಪಗಳನ್ನು ವಿಚಾರಣೆ ಮಾಡಿ ಆಧಾರರಹಿತವೆಂದು ಹೇಳಿದ್ದಾನೆ ಎಂದು ಹೇಳಿರುವಿರಿ. ಆದರೆ ಈ ಮನುಷ್ಯರು ಸುಳ್ಳು ಆರೋಪಗಳನ್ನು ಮಾಡುವವರೆಂದು ತಿಳಿಯತಕ್ಕದ್ದಲ್ಲ. ಸುಬೇದಾರನ ವಿಚಾರಣೆ ಪಕ್ಷಪಾತರಹಿತವಾಗಿತ್ತೆಂದು ನಾನು ಹೇಳುವುದಿಲ್ಲ. ಈ ಬಗ್ಗೆ ಕರ್ನಾಟಕ ಕಾನ್ಫರೆನ್ಸಿನ ಅಧ್ಯಕ್ಷರಾದ ಹನುಮಂತರಾವ್ ಕಕ್ಕೇರಿ, ಉಪಾಧ್ಯಕ್ಷರಾದ ಜನಾರ್ದನರಾವ್ ದೇಸಾಯಿ ಅವರಿಂದ ನಡೆದ ವಿಚಾರಣೆಯಲ್ಲಿ ಸುಬೇದಾರನು ಪಕ್ಷಾತೀತರೆಂದು ಸಾಬೀತಾಗಿಲ್ಲ. ಅಲ್ಲದೆ ಸರ್ಕಾರ ಯಾವಾಗಲೂ ಇಂತಹ ಆಪಾದನೆಗಳನ್ನು ಆಧಾರ ರಹಿತ ಆಪಾದನೆ ಎಂದು ಹೇಳುವುದು ಸರ್ವಸಾಮಾನ್ಯ. ಈ ಗೆಳೆಯರ ಬಗೆಗೆ ತಾವು ಮಾಡಿದ ಆಪಾದನೆಗಳು ಸ್ಥಳೀಯ ಪೋಲೀಸರು ಕಂದಾಯ ಅಧಿಕಾರಿಗಳು ನೀಡಿದ

ದೂರನ್ನು ಅವಲಂಬಿಸಿದೆ. ಆದರೆ ಇವರ ವಿಚಾರಣೆ ಸರಿ ದಿಕ್ಕಿನಲ್ಲಿ ನಡೆದಿಲ್ಲ. ತಾವು ಈ ಗೆಳೆಯರ ಬಗೆ ಮಾಡಿದ ದೂರುಗಳು ನಿಜವಾಗಿಯೂ ಗಂಭೀರವಾಗಿವೆ. ಆದರೆ ಅವು ನಂಬಲರ್ಹವಲ್ಲ. ಕರ್ನಾಟಕ ಕಾನ್ಫರೆನ್ಸ್ ಸಂಸ್ಥೆ ಜವಾಬ್ದಾರಿಯುತ ಸಂಘಟನೆ. ನಾನು ಈ ಬಗ್ಗೆ ವೈಯಕ್ತಿಕ ಬೇರೆ ವಿಚಾರಣೆ ನಡೆಸಬೇಕು ಎನ್ನುತ್ತೇನೆ. ವತನದಾರನಿಗೆ ಲೆವಿ ಸಂಗ್ರಹಿಸದಿದ್ದರೆ ೫೦೦ ರೂ. ಕೊಡುವುದಾಗಿ ಅಡವಿರಾವ್ ಹೇಳುತ್ತಾರೆಂದು ಆಪಾದಿಸಿರುವಿರಿ. ನನ್ನ ಮಾಹಿತಿಗಾಗಿ ಆ ವತನದಾರರ ಹೆಸರನ್ನು ತಿಳಿಸಬೇಕು.

ನಾನು ಅಡವಿರಾವ್ ಫಡ್ನವೀಸ್ ಜೊತೆಗೆ ಮಾತನಾಡಿದೆ. ಅವರು ಮೂರು ವರ್ಷದಿಂದ ಸಂಗ್ರಹಿಸಿದ ಕಡತವನ್ನು ತೋರಿಸಿದರು. ಲೆವಿ ಸಂಗ್ರಹದಲ್ಲಿ ಅಧಿಕಾರಿಗಳು ಅಕ್ರಮಗಳನ್ನು ಜರುಗಿಸಿದ್ದಾರೆ ಎಂದು ತಿಳಿದುಬಂದಿದೆ. ಅವರು ಜಿಲ್ಲಾ ಕಲೆಕ್ಟರರಿಗೆ ಬರೆದು ತಾಲ್ಲೂಕವಾರ ಅಧಿಕಾರಿಗಳ ಮೇಲೆ ಸರಿಯಾದ ಕ್ರಮಕ್ಕಾಗಿ ವಿನಂತಿಸಿದ್ದಾರೆ. ಅವರು ಬೀದಿ ಪ್ರಚಾರಕ್ಕಾಗಿ ಯಾವುದೇ ಪತ್ರಿಕೆಗೆ ಹೋಗಿಲ್ಲ. ಇಂತಹ ಒಳ್ಳೆಯ ಕೆಲಸ ಮಾಡಿದವರಿಗೆ ನಿಜವಾಗಿಯೂ ಶ್ಲಾಘನೆ ಮಾಡಬೇಕಿತ್ತು. ಅದರ ಬದಲಾಗಿ ದಂಡ ವಿಧಿಸುವುದು ಸರಿಯಲ್ಲ ಎಂದು ಉತ್ತರಿಸಿ ಜಿ. ರಾಮಾಚಾರ್ಯರು ಪ್ರಜಾಹಿತ ಸಂಘ ಹಾಗೂ ಅದರ ಸದಸ್ಯರ ಮೇಲೆ ಮಾಡಿದ ಆಪಾದನೆಗಳನ್ನು ತಿರಸ್ಕರಿಸಿ ಸರಕಾರಕ್ಕೆ ಬುದ್ಧಿ ಹೇಳಿದರು.

### ಗ್ರಾಮಾಧಿಕಾರಿಗಳ ರಾಜೀನಾಮೆ:

ಈ ಕಾರಣಕ್ಕಾಗಿ ೧೨.೦೯.೧೯೪೭ ರಂದು ಕಸಬೆ ಪಾಂಡುರಂಗರಾವ್ ಪಟವಾರಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇದರಿಂದ ಕುಪಿತರಾದ ಅಧಿಕಾರಿಗಳು ಇವರನ್ನು ಸಂಶಯ ದೃಷ್ಟಿಯಿಂದ ನೋಡಲು ಪ್ರಾರಂಭಿಸಿ ಅವರ ಕುಟುಂಬದ ಸದಸ್ಯರ ಮೇಲೆ ಆಪಾದನೆಗಳನ್ನು ಹೊರಿಸಿದರು. ಯಲಬುರ್ಗ ತಾಲೂಕಿನ ದ್ಯಾಂಪುರ ಚೆನ್ನೇನಹಳ್ಳಿ ಸರಪಂಚರಾಗಿದ್ದ ಗುರುಪಾದಯ್ಯ ತಂದೆ ಕಳಕಯ್ಯ ಹಾಗೂ ಬಸ್ಸಪ್ಪ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಮಿಟಗಲದಿನ್ನಿ (ಮಿಡುಗಲದಿನ್ನಿ), ಬಂಡೂರು, ಗುಂಜಳ್ಳಿ ರಾಘವೇಂದ್ರ ರಾವ್, ಭೀಮರೆಡ್ಡಿ ನರಸರೆಡ್ಡಿ ವೀರಾರೆಡ್ಡಿಯವರು ತಮ್ಮ ಮಾಲಿಪಾಟೀಲ ಹಾಗೂ ಪೊಲೀಸ್ ಪಾಟೀಲ್ ಹುದ್ದೆಗಳಿಗೆ ರಾಜೀನಾಮೆ ಇತ್ತರು.



ಕಾಂಗ್ರೆಸ್ಸಿನವರೊಂದಿಗೆ ಸೇರಿಕೊಂಡರು. ಇದೇ ಸಂದರ್ಭದಲ್ಲಿ ಗುಲ್ಬರ್ಗದ ಅಬಕಾರಿ ಇನ್ಸಪೆಕ್ಟರ್ ಎಸ್. ಹನುಮಂತರಾವ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಚಳುವಳಿಗೆ ಸೇರಿ ಜೈಲುವಾಸ ಅನುಭವಿಸಿದರು.

### ಭಾರತ ಒಕ್ಕೂಟ ಸೇರಿರಿ

### ರಾಯಚೂರು ಜಿಲ್ಲೆಯಲ್ಲಿ ನಡೆದ ಚಳುವಳಿಗಳು:

ಸೊಲ್ಲಾಪುರದಲ್ಲಿ ರಾಜ್ಯ ಕಾಂಗ್ರೆಸ್ ಕಾರ್ಯಕಾರಿ ಮಂಡಳಿ ಸಭೆ ನಡೆಯಿತಷ್ಟೆ. ಅದರ ಪ್ರಮುಖ ಉದ್ದೇಶವು ಹೈದರಾಬಾದ್ ಪ್ರಾಂತವು ಭಾರತ ಒಕ್ಕೂಟದಲ್ಲಿ ಸೇರಬೇಕು. ಆ ಬಗ್ಗೆ ನಿಜಾಮನು ತನ್ನ ಧೋರಣೆಯನ್ನು ಬದಲಿಸಲು ರಾಜ್ಯಾದ್ಯಂತ ಒತ್ತಡ ತರಬೇಕು. ಆ ಕ್ರಮವಾಗಿ ಒಂದೆಡೆ ಸತ್ಯಾಗ್ರಹ ಚಳುವಳಿ, ಧ್ವಜಾರೋಹಣ, ಸ್ವಾತಂತ್ರ್ಯ ಸಾರುವುದು ಇನ್ನೊಂದೆಡೆ ಸರ್ಕಾರದ ಆದಾಯದ ಮೂಲಗಳನ್ನು ನಾಶಗೊಳಿಸುವುದು ಹಾಗೂ ಸರ್ಕಾರಿ ವ್ಯವಸ್ಥೆಯ ಆಡಳಿತವನ್ನು ಪರಿಪೂರ್ಣವಾಗಿ ವಿಫಲಗೊಳಿಸಿ, ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸಹಕರಿಸುತ್ತ ಜನಸಾಮಾನ್ಯರು ತಾವು ಹೋರಾಟಕ್ಕೆ ಅಣಿಯಾದದ್ದು ಒಂದು ಘಟ್ಟ.

ಜಟಾಧಾರಿಯಾದ ತರುಣ ರಾ. ಗು. ಜೋಷಿಯವರು ಅದಮ್ಯ ದೇಶಭಕ್ತ ಬರಹಗಾರ. ಕರ್ಮವೀರ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿಗಾರರಾಗಿ ಕೆಲಸ ಮಾಡುತ್ತಿದ್ದರು. ಈ ಸಲ ಸತ್ಯಾಗ್ರಹ ಮಾಡಿ ಜೈಲುವಾಸದ ಅನುಭವ ಪಡೆಯಬೇಕೆಂದು ರಾ. ಗು. ಜೋಷಿಯವರು ಮಾನಸಿಕವಾಗಿ ಬಹಳಷ್ಟು ಉತ್ಸುಕರಾಗಿದ್ದರು. ಈ ಸತ್ಯಾಗ್ರಹದ ಪ್ರಥಮ ತಂಡದಲ್ಲಿ ರಾ. ಗು. ಜೋಷಿ, ವಕೀಲರೂ ಕಾಂಗ್ರೆಸ್ಸಿನ ನಾಯಕರೂ ಆಗಿದ್ದ ಗುಡಿಹಾಳ ಹನುಮಂತರಾಯರು, ವೈಶ್ಯರೂ ವ್ಯಾಪಾರಿಗರೂ ಆದ ದೋಮಕುಂಟಿ ನಾರಾಯಣಪ್ಪನವರು ಸಿದ್ಧರಾಗಿದ್ದರು. ಈ ಬಗೆಗೆ ನಾಯಕರಾದ ಜಿ. ಮಧ್ವರಾಯರು, ಲ. ಕೃ. ಸರಾಫರು, ಬಿ. ಹೆಚ್. ಇನಾಂದಾರರು ಒಪ್ಪಿಗೆ ನೀಡಿದರು.

### ರಾಮಶಾಲಾ ಬಯಲಿನಲ್ಲಿ ಸತ್ಯಾಗ್ರಹ: ಭಾರತದ ಒಕ್ಕೂಟ ಸೇರಲು ಆಗ್ರಹ

ಆಗಸ್ಟ್ ೭ ಗುರುವಾರ ದೊಡ್ಡದಾದ ರಾಮಶಾಲಾ ಬಯಲಿನಲ್ಲಿ ಸತ್ಯಾಗ್ರಹ. (ಈಗಿನ ಕರ್ನಾಟಕ ಸಂಘದ ಬಯಲು ಜಾಗ) ಈ ಸುದ್ದಿ ಮೊದಲೇ

ಹರಡಿದ್ದರಿಂದ ನೂರಾರು ಜನರು ಅಲ್ಲಲ್ಲಿ ಚದುರಿ ಸತ್ಯಾಗ್ರಹ ನೋಡಲು ನಿಂತಿದ್ದರು. ಆಗ ಸಮಯ ಸಂಜೆ ೪ ಘಂಟೆ. ರಾ. ಗು. ಜೋಷಿ, ಗುಡಿಹಾಳ ಹನುಮಂತರಾಯರು, ದೋಮಕುಂಟಿ ನಾರಾಯಣಪ್ಪ ಬಂದರು. ರಾಮಶಾಲಾ ಬಯಲಿನಲ್ಲಿ ಒಂದೆಡೆ ಜನರ ಗುಂಪು ಇವರನ್ನು ಕಂಡು ಪುಳಕಿತವಾಗಿದ್ದರೆ, ಸುತ್ತಲೂ ಪಹರೆಯ ಪೊಲೀಸರು ಎಚ್ಚೆತ್ತು ಯಾವುದೇ ಘಟನೆಗಾಗಿ ಸಜ್ಜಾಗಿ ನಿಂತಿದ್ದರು. ಜನರ ಗುಂಪು ಹೆಚ್ಚುತ್ತಾ ಹೋಯಿತು. ಏನಾಗುವುದೋ ಎಂದು ಕೆಲವರಲ್ಲಿ ಭೀತಿ ಆವರಿಸಿದ್ದರೆ, ಸ್ವಾತಂತ್ರ್ಯಕ್ಕಾಗಿ ಬಲಿದಾನಕ್ಕೆ ಸಿದ್ಧರಾದ ಈ ತರುಣರನ್ನು ಅಭಿನಂದಿಸಲೋಸುಗ ಹಲವರು ಬಂದಂತೆ ಇತ್ತು. ಜನಸಂದಣಿ ಹೆಚ್ಚಾದಂತೆ ಪೊಲೀಸ್ ಅಧಿಕಾರಿಗಳು ತಮ್ಮ ಬಸ್ಸಿನಿಂದ ಇಳಿದು ಸಜ್ಜಾಗಿ ನಿಂತರು. ರಾ. ಗು. ಜೋಷಿಯವರು "೫೦೦ಕ್ಕೂ ಮಿಕ್ಕಿ ಸಂಸ್ಥಾನಿಕರು ಭಾರತದ ಒಕ್ಕೂಟದಲ್ಲಿ ಸೇರಿರುವಾಗ ನಿಜಾಮರು ಹಟಮಾಡದೆ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಹಿಂದಿ ಒಕ್ಕೂಟದಲ್ಲಿ ಸೇರಬೇಕೆಂದು" ಉದ್ಘೋಷಿಸಿ ಸತ್ಯಾಗ್ರಹದ ಉದ್ದೇಶ ಹೇಳಿದರು. ಹನುಮಂತರಾಯರು ಕಾಂಗ್ರೆಸ್ ಅಧಿವೇಶನದ ಗೊತ್ತುವಳಿ ಓದಿದರು. ಹೊಣೆಗಾರ ರಾಜ್ಯದ ಸ್ಥಾಪನೆ ಮತ್ತು ಹಿಂದಿ ಒಕ್ಕೂಟದಲ್ಲಿ ಸೇರುವ ಅನಿವಾರ್ಯತೆಯನ್ನು ರಾ. ಗು. ಜೋಷಿಯವರು ಹೇಳಿ ಜನರಿಗೆ ಸತ್ಯಾಗ್ರಹದ ಕರೆ ಕೊಟ್ಟರು. ಆಗ ಪೊಲೀಸ್ ಅಧಿಕಾರಿಗಳು ನೇರವಾಗಿ ಇವರ ಹತ್ತಿರ ಹೋಗಿ ಬಂಧಿಸಿ, ಬಸ್ಸಿನಲ್ಲಿ ಪೊಲೀಸ್ ಠಾಣೆಗೆ ಕರೆದೊಯ್ದರು. ನಂತರ ರಾಯಚೂರು ಜೈಲಿಗೆ ಕಳಿಸಲಾಯಿತು. ದಾರಿಯುದ್ದಕ್ಕೂ ನಿಂತ ಜನ ಇವರನ್ನು ನೋಡಿ ಸಂತಸಪಟ್ಟು ಕೈಮುಗಿದು ಶುಭ ಕೋರಿದರು. ನಂತರ ಜನರ ಗುಂಪಿನಿಂದ ಅಮಾಯಕರಾದ ಶಂಕರ ಮತ್ತು ಈಶ್ವರನನ್ನು ಬಂಧಿಸಿ ಜೈಲಿಗೆ ತಂದರು. ಈ ಘಟನೆಯನ್ನು ರಾ. ಗು. ಜೋಷಿಯವರು ತಮ್ಮ ನೆನಪಿನ ಪುಟಗಳಲ್ಲಿ ಮೈನವಿರೇಳುವಂತೆ ಪ್ರಸ್ತಾಪಿಸಿದ್ದಾರೆ.

❑

## ಅಧ್ಯಾಯ–೫
## ಭಾರತ ಸ್ವಾತಂತ್ರ್ಯ ಘೋಷಣೆ

ಇಂಗ್ಲೆಂಡಿನ ಆ್ಯಟ್ಲೆ ಸರ್ಕಾರವು ಭಾರತೀಯರ ಬಹುದಿನದ ಬೇಡಿಕೆಯಾಗಿದ್ದ, ಅದಕ್ಕಾಗಿ ನಡೆದ ೯೦ ವರುಷಗಳ ಹೋರಾಟಕ್ಕೆ, ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಗೆ, ಸತ್ಯಾಗ್ರಹಕ್ಕೆ ಮಣಿದು ೧೯೪೭ ರಂದು ಭಾರತಕ್ಕೆ ಸ್ವಾತಂತ್ರ್ಯ ನೀಡಿತು. ಆಗ ಹಿಂದೂಸ್ಥಾನವು ಭಾರತ ಹಾಗೂ ಪಾಕಿಸ್ತಾನಗಳೆಂದು ವಿಭಜನೆ ಹೊಂದಿ ಸ್ವಾತಂತ್ರ್ಯ ಪಡೆದು ಎರಡು ರಾಷ್ಟ್ರಗಳಾದವು.

ಇದರ ಜೊತೆಗೆ ಇಂಡಿಯನ್ ಇಂಡಿಪೆಂಡೆಂಟ್ ಆಕ್ಟ್ ಪ್ರಕಾರ ಭಾರತದಲ್ಲಿದ್ದ ೫೬೨ ಸಂಸ್ಥಾನಗಳು ಸ್ವತಂತ್ರವಾದವು. ಅವುಗಳನ್ನು ಸಾಮ, ದಾನ, ಭೇದ ದಂಡೋಪಾಯಗಳಿಂದ ೫೫೯ ಸಂಸ್ಥಾನಗಳನ್ನು ಸೇರ್ಪಡೆ ಒಪ್ಪಂದದನ್ವಯ ಭಾರತಕ್ಕೆ ಸೇರಿದವು. ಜಮ್ಮು ಕಾಶ್ಮೀರ, ಜುನಾಗಡ ಹಾಗೂ ಹೈದರಾಬಾದ್ ಸಂಸ್ಥಾನಗಳು ಮಾತ್ರ ಸ್ವತಂತ್ರ ರಾಜ್ಯಗಳಾಗಿ ಉಳಿದವು. ಇವು ಭಾರತದ ಬೆನ್ನೆಲುಬಿಗೆ ಹುಣ್ಣಾದವು. ಜುನಾಗಡದ ನವಾಬ ಸಂಪತ್ತು ಹೇರಿಕೊಂಡು ವಿಮಾನದಿಂದ ಪಾಕಿಸ್ತಾನಕ್ಕೆ ಪರಾರಿಯಾದರೆ, ಕಾಶ್ಮೀರದ ಹರಿಸಿಂಗ ಭಾರತದೊಡನೆ ೩೭೦ ಸಂವಿಧಾನದ ಕಲಮನ್ನು ಹೊಂದಿ ಭಾರತದಲ್ಲಿ ಸೇರ್ಪಡೆಯಾದನು. ಆದರೆ ಹೈದರಾಬಾದನ ನಿಜಾಮನು ದಕ್ಷಿಣದಲ್ಲಿ ಸ್ವತಂತ್ರ ರಾಷ್ಟ್ರವಾಗಲು ಪ್ರಯತ್ನಿಸಿದನು. ಭಾರತದೊಡನೆ ಯಥಾಸ್ಥಿತಿ ಒಪ್ಪಂದವನ್ನು ಕೆಲ ಕಾಲದವರೆಗೆ, ಒಂದು ವರುಷದವರೆಗೆ ಮಾಡಿಕೊಂಡನು. ಅದಕ್ಕಾಗಿ ನಿಜಾಮನು ಸ್ವತಂತ್ರ ಹೈದರಾಬಾದಿಗಾಗಿ ಅನೇಕ ಪೂರ್ವಭಾವಿ ಯೋಜನೆಗಳನ್ನು ಹಾಕಿಕೊಂಡನು.

೧. ಪಾಕಿಸ್ತಾನಕ್ಕೆ ೨೦ ಸಾವಿರ ಪೌಂಡು ಸಹಾಯಧನವಾಗಿ ನೀಡಿ ನೈತಿಕ ಬೆಂಬಲ ಹಾಗೂ ಕಷ್ಟ ಕಾಲದಲ್ಲಿ ಸಹಾಯ ಆಪೇಕ್ಷಿಸಿದನು.

೨. ಗೋವಾ ಖರೀದಿಸಿ ತನ್ನ ರಾಜ್ಯಕ್ಕೆ ಬಂದರು ಸಮುದ್ರಮಾರ್ಗ ಹುಡುಕಿಕೊಂಡು, ವ್ಯಾಪಾರ ಕುದುರಿಸಲು ಪೋರ್ಚುಗೀಸರೊಡನೆ ಮಾತುಕತೆ ನಡೆಸಿದನು.

೩. ಇಂಗ್ಲೆಂಡಿನ ಪ್ರಭಾವಿ ಮಾಜಿ ಪ್ರಧಾನಿ ಚರ್ಚಿಲ್‌ರ ಮುಖಾಂತರ ಸ್ವತಂತ್ರ ಹೈದ್ರಾಬಾದ್ ರಾಜ್ಯಕ್ಕೆ ಬೆಂಬಲ ಕೋರಿದನು.

೪. ಹೈದ್ರಾಬಾದ್ ಸಿಕೆಂದರಾಬಾದ್‌ಗಳಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆ ಪ್ರಾರಂಭಿಸಿದನು.

೫. ಕಾಟನ್ ಸಿಡ್ನೆ ಎಂಬ ಏಜೆಂಟನಿಂದ ಯುರೋಪ್‌ನಿಂದ ಶಸ್ತ್ರಾಸ್ತ್ರ ಆಮದು ಪ್ರಾರಂಭಿಸಿದನು.

೬ ಸೈನ್ಯ ಶಕ್ತಿ ಹೆಚ್ಚಿಸಲು ಸೈನ್ಯ ತಯಾರಿ ನಡೆಸಿದನು.

೭. ಯಥಾಸ್ಥಿತಿ ಒಪ್ಪಂದ ಗಟ್ಟಿಗೊಳಿಸಲು ಸರ್ ವಾಲ್ಟರ್ ಮಾರ್ಕ್ ಎಂಬ ಇಂಗ್ಲಿಷ್ ಅಧಿಕಾರಿಯನ್ನು ತನ್ನ ಅಡ್ವೈಜರಿ ಕಮಿಟಿ ಸದಸ್ಯನನ್ನಾಗಿ ಮಾಡಿಕೊಂಡು ಮೌಂಟ್ ಬ್ಯಾಟನನ ಮೇಲೆ ಪ್ರಭಾವ ಬೀರಲು ಯತ್ನಿಸಿದನು.

೮ ಸ್ವಾತಂತ್ರ್ಯ ಹೋರಾಟಗಾರರನ್ನು ಮಟ್ಟಹಾಕಲು ರಜಾಕಾರರೆಂಬ ಅರೆ ಸೈನಿಕ ಪಡೆಗಳನ್ನು ಹೈದ್ರಾಬಾದ್ ರಾಜ್ಯದಾದ್ಯಂತ ಕಳುಹಿಸಿದನು. ಇದರ ಪರಿಣಾಮವಾಗಿ ಹಿಂಸೆ, ಲೂಟಿ, ಅತ್ಯಾಚಾರಗಳು ಅವ್ಯಾಹತವಾಗಿ ನಡೆದವು. ಇವರೇ ರಜಾಕಾರರು. ನಮ್ಮ ಭಾಗದಲ್ಲಿ ರಜಾಕಾರರ ದೌರ್ಜನ್ಯಕ್ಕೆ ರಜಾಕಾರರ ಹಾವಳಿ ಎಂದು ಕರೆಯುತ್ತಾರೆ.

೧೯೪೭ ಆಗಸ್ಟ್ ಹದಿನೈದರಂದು ಭಾರತೀಯರ ಭಾವೋಜ್ವಲದ ಸಂಕೇತವಾದ ತ್ರಿರಂಗ ಧ್ವಜವು ದಿಲ್ಲಿಯ ಕೆಂಪುಕೋಟೆಯ ಮೇಲೆ ಹಾರಿತು. ಬ್ರಿಟಿಷರ ಧ್ವಜವು ಕೆಳಗಿಳಿಯಿತು. ಭಾರತದ ತುಂಬೆಲ್ಲಾ ಇದು ಹಬ್ಬವಾಗಿ ಜನ ಕುಣಿದು ಕುಪ್ಪಳಿಸಿ ಸ್ವಾತಂತ್ರ್ಯದ ಗೀತೆ ಹಾಡುತ್ತಿದ್ದರೆ, ವಂದೇ ಮಾತರಂ ಎಲ್ಲೆಡೆ ಮೊಳಗುತ್ತಿದ್ದರೆ, ಇಲ್ಲಿ ಸ್ಮಶಾನ ಮೌನ ಆವರಿಸಿತ್ತು. ಇಡೀ ಹೈದರಾಬಾದ್



ಪ್ರಾಂತದಲ್ಲಿ ಸ್ವಾತಂತ್ರ್ಯ ದಿನ ಆಚರಿಸುವುದು ಘೋರ ಅಪರಾಧವಾಗಿತ್ತು. ಸೈನಿಕರ ಕೂಚುಗಳು ನಡೆದವು. ತ್ರಿರಂಗ ಧ್ವಜ ಇಲ್ಲಿ ನಿಷೇಧಿತ ಬಟ್ಟೆಯಾಯಿತು. ವಂದೇಮಾತರಂ ಗೀತೆ ದೇಶದ್ರೋಹದ ಹಾಡಾಯಿತು, ಗಾಂಧೀಟೋಪಿ ತಿರಸ್ಕೃತವಾಯಿತು. ನವಭಾರತದ ನಿರ್ಮಾಪಕರಾದ ಗಾಂಧೀಜಿ, ನೆಹರು, ಸರ್ದಾರ ವಲ್ಲಭಭಾಯಿ ಪಟೇಲ, ಮೌಲಾನಾ ಅಬ್ದುಲ್ ಕಲಂ ಆಜಾದ್ ಮೊದಲಾದ ದೇಶನಾಯಕರ ಭಾವಚಿತ್ರಗಳು ಸಹ ನಿಜಾಮನಿಂದ ಬಹಿಷ್ಕೃತವಾದವು.

## ಸಾಥ್ ಕಛೇರಿಯ ಮೇಲೆ ಧ್ವಜಾರೋಹಣ

ರಾಯಚೂರು ನಗರ ಸೇರಿ ಎಲ್ಲಿಯೂ ಈ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಎಲ್ಲೆಲ್ಲೂ ಧ್ವಜವೇರಿಸದಂತೆ ಕಟ್ಟೆಚ್ಚರ. ಊರ ತುಂಬ ಪೊಲೀಸರ ಹೆಜ್ಜೆಗಳು, ವಂದೇಮಾತರಂ ಘೋಷಿಸದಂತೆ ಭೀಕರ ರಾಜಾಜ್ಞೆ! ಎಲ್ಲೆಡೆ ಸ್ಮಶಾನ ಮೌನ. ಆದರೆ ಈ ಭಯಾನಕ ಗಂಭೀರ ಪರಿಸ್ಥಿತಿಯಲ್ಲಿಯೂ ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ದೇಶಕ್ಕಾಗಿ ಧ್ವಜವೇರಿಸಿ ಕೃತಾರ್ಥತೆ ಪಡೆಯುವ ತರುಣರಿಗೇನೂ ಕಡಿಮೆ ಇರಲಿಲ್ಲ.

ರಾಯಚೂರಿನ ಸಾಥ ಕಛೇರಿ ಪ್ರಸಿದ್ಧವಾದ ಐತಿಹಾಸಿಕ ಕಟ್ಟಡ, ಜಿಲ್ಲಾಧಿಕಾರಿಯ ಸ್ಥಳ, ಅನೇಕ ಕಛೇರಿಗಳು ಆ ಕಟ್ಟಡದಲ್ಲಿವೆ. ಅದು ದಿಬ್ಬದ ಮೇಲೆ ಇರುವ ಸುಂದರ ಕಟ್ಟಡ. ಸುತ್ತಮುತ್ತಲೂ ಪೊಲೀಸರ ಕಾವಲು. ಅಲ್ಲಲ್ಲಿ ಪಠಾಣರು, ರಜಾಕಾರರು ಗಸ್ತು ಹಾಕುತ್ತಿದ್ದರು. ಅವರ ಬೂಟಿನ ಸಪ್ಪಳ ಬಿಟ್ಟರೆ ಎಲ್ಲೆಲ್ಲೂ ನೀರವತೆ. ಸರಿರಾತ್ರಿ ಕತ್ತಲು ತನ್ನ ಸಾಮ್ರಾಜ್ಯವನ್ನು ವ್ಯಾಪಿಸಿತ್ತು. ಆ ಹೊತ್ತಿನಲ್ಲಿ ಹಿಂಬದಿಯಿಂದ ಮೆಲ್ಲನೆ ಕತ್ತಲೆಯಲ್ಲಿ ಕಳ್ಳ ಹೆಜ್ಜೆಯಿಡುತ್ತಾ ಕೈಯಾಡಿಸುತ್ತ ತೆವಳುತ್ತ ಕಟ್ಟಡದ ಹಿಂಬದಿಗೆ ಬಂದ. ಶರಭಯ್ಯ, ಚಂದ್ರಯ್ಯ, ಪರ್ವತರೆಡ್ಡಿಯವರು ಎರಡು ಬದಿಗೆ ಪೊಲೀಸರ ಕಾವಲು ನೋಡುತ್ತಾ ನಿಂತರು. ಎಂ. ನಾಗಪ್ಪ ಮತ್ತು ಬಸಣ್ಣ ಒಂದು ಗತ್ತಿನಲ್ಲಿ ಪಸಾಪಸಾ ಸದ್ದಿಲ್ಲದೆ ಕಟ್ಟಡದ ಮೇಲೆ ಏರಿದರು. ಮೇಲೆ ನಿಂತಾಗ ಕತ್ತಲೆಯ ಮಧ್ಯದಲ್ಲಿ ಧ್ವಜದ ಕಂಬ ಕಾಣಿಸಿತು. ಮೆಲ್ಲನೆ ಅಸಫ ಜಹಾ ಧ್ವಜ ಇಳಿಸಿ ದಾರಕ್ಕೆ ತ್ರಿರಂಗ ಧ್ವಜ ಕಟ್ಟಿ ಮೇಲೇರಿಸಿದರು. ಅದಕ್ಕೆ ಕಣ್ಣಂಚಿನಲ್ಲಿಯೇ ವಂದನೆ ಸಲ್ಲಿಸಿ ಮೆಲ್ಲನೆ ಇಳಿದರು. ಕೆಳಗೆ ನಿಂತವರು ಇವರನ್ನು ತಬ್ಬಿಕೊಂಡು ಮಾತಿಲ್ಲದೆ ಮೆಲ್ಲಗೆ ಸಾಥ್ ಕಛೇರಿ ದಿನ್ನೆ ಇಳಿದು ಕತ್ತಲಲ್ಲಿ ಕರಗಿದರು. ಪೊಲೀಸರು ಗಸ್ತಿನ

ಬೂಟಿನ ಶಬ್ದ ಮಾತ್ರ ಕೇಳಿ ಬರುತ್ತಿತ್ತು. ಯಾರು ಧ್ವಜವೇರಿಸಿದ್ದನ್ನು ನೋಡಲೇ ಇಲ್ಲ. ಹುಡುಗರ ಸಾಹಸ ಯಾತ್ರೆ ಫಲಿಸಿತ್ತು. ಏನಾದರೂ ಅಚಾತುರ್ಯವಾಗಿದ್ದರೆ ೫ ಜನರು ಪ್ರಾಣಕ್ಕೆ ಎರವಾಗಬೇಕಿತ್ತು. ಬಂದೂಕಿನ ಗುಂಡುಗಳಿಗೆ ಆಹುತಿಯಾಗುತ್ತಿದ್ದರು.

ಈ ಧ್ವಜವೀರರು ಬೆಳಗಿನ ಅನಾಹುತ ನೆನೆದು ಪಾರಾಗಬೇಕೆಂದು ರಾತ್ರಿಯೆಲ್ಲ ನಡೆದು ತುಂಗಭದ್ರಾ ನದಿಯನ್ನು ದಾಟಿ ಸ್ವತಂತ್ರ ಭಾರತದ ಮದ್ರಾಸ್ ಪ್ರಾಂತದ ಆದೋನಿಗೆ ಹೋಗಿ ಪಾರಾದರು.

## ಗುಬ್ಬೇರ ಬೆಟ್ಟದಲ್ಲಿ ತಿರಂಗಿ ಧ್ವಜ

ಆಗಸ್ಟ್ ೧೫ ರ ಸೂರ್ಯೋದಯ ರಾಯಚೂರಿನಲ್ಲಿ ತ್ರಿರಂಗ ಧ್ವಜ ಹೊತ್ತು ತಂದಿತ್ತು. ಸ್ವಾತಂತ್ರ್ಯದ ಸವಿಯನ್ನು ನೆನೆದವರ ಮನಸ್ಸಿನಲ್ಲಿ ಆಹ್ಲಾದಕರವಾದ ಭಾವನೆಗಳನ್ನು ಕ್ಷಣಮಾತ್ರ ಬಿತ್ತಿದವು. ಪೋಲೀಸರು, ರಜಾಕಾರರು ಬೆಚ್ಚಿಬಿದ್ದರು. ಸುತ್ತಮುತ್ತ ನೋಡುತ್ತ ಇರುವಾಗ ಪೋಲೀಸರಿಗೆ, ಅಧಿಕಾರಿಗಳಿಗೆ ಮೈನಡುಗಿಸುವ ಮತ್ತೊಂದು ಸುದ್ದಿ ರಾಯಚೂರಿನ ರಕ್ಷಣೆಗೆ ನಿಂತಂತೆ ಇರುವ ಗುಬ್ಬೇರು ಬೆಟ್ಟದಲ್ಲಿ ರಾತ್ರೋರಾತ್ರಿ ಧ್ವಜವೇರಿಸಿದ್ದು, ಅದು ಗಾಳಿಯೊಡನೆ ಪಟಪಟ ಸದ್ದು ಮಾಡುತ್ತ ಬಾನೆತ್ತರ ಹಾರಿದ್ದು, ಆ ಧ್ವಜಾರೋಹಣದ ಧೀಮಂತ ತನ್ನ ಹೆಸರನ್ನು ಬಹಿರಂಗ ಪಡಿಸಲೇ ಇಲ್ಲ. ಸಾರ್ಥಕ್ಯದ ಭಾವದಲ್ಲಿ ಭಾರತೀಯ ಭಾವನೆಗಳನ್ನು ಅಲ್ಲಿ ಅವನು ಅರಳಿಸಿದ್ದನು. ರಾಯಚೂರು ಜೈಲು ಸೇರಿದ್ದ ರಾ. ಗು. ಜೋಷಿ ಖೈದಿಗಳಿಗೆಲ್ಲ ಅದನ್ನು ತೋರಿಸಿ ವಂದನೆ ಸಲ್ಲಿಸಿದ ಘಟನೆ. ಅಧಿಕೃತ ಧ್ವಜವೇರಿಸಿದ ಸಾಹಸಿಯನ್ನು ಮನಸ್ಸಿನಲ್ಲಿಯೇ ಅಭಿನಂದಿಸಿದ್ದು ಅವರ ಪುಸ್ತಕ ನೆನಪಿನ ಪುಟಗಳಲ್ಲಿ ದಾಖಲೆಯಾಗಿದೆ.

## ಎರಡನೆಯ ಸತ್ಯಾಗ್ರಹ:

ಆಗಸ್ಟ್ ೧೫ ರ ದಿನವೇ 'ಹಿಂದಿ ಒಕ್ಕೂಟ ಸೇರಿ' ಕರೆಯ ಮೇರೆಗೆ ಎರಡನೆಯ ಸತ್ಯಾಗ್ರಹಿ ತಂಡ ಭಾರತ ಧ್ವಜ ಹಿಡಿದು ಸತ್ಯಾಗ್ರಹ ಮಾಡಿತು. ಮಧ್ವರಾಯರು, ಲಕ್ಷ್ಮಣಾಚಾರ್ಯ ವೈದ್ಯ, ಲಿಂಗನಖಾನದೊಡ್ಡಿ ರಾಘವೇಂದ್ರ ಬಂಧಿತರಾದರು. ಆಗ ಬೆರಗುಗಣ್ಣಿನಿಂದ ಇವರನ್ನು ನೋಡಿ ಇವರ ಧೈರ್ಯಕ್ಕೆ ಮೆಚ್ಚಿದರು. ಊರಿನಲ್ಲೆಲ್ಲಾ ಸಾಥ್ ಕಛೇರಿ, ಗುಬ್ಬೇರು ಬೆಟ್ಟದಲ್ಲಿ ಧ್ವಜವೇರಿಸಿದ ಸುದ್ದಿಯಾದರೆ, ಜಿ. ಮಧ್ವರಾಯರು ಮತ್ತು ಅವರ ತಂಡ ನಗುಮೊಗದಿಂದ ಸತ್ಯಾಗ್ರಹ ಮಾಡಿದುದು ದಾಖಲೆಯಾಯಿತು. ಆಗಸ್ಟ್ ೧೬ರ ಹಿಂದೂ ಪತ್ರಿಕೆಯಲ್ಲಿ ಸುದ್ದಿಯಾಯಿತು.



## ಹೆಂಬೆರಾಳದಲ್ಲಿ ಧ್ವಜ

ಪ್ರಖ್ಯಾತ ಕವಿ ಶಾಂತರಸರು ಹೇಳುವಂತೆ ಅನೇಕ ಹಳ್ಳಿಗಳಲ್ಲಿ ರಾಷ್ಟ್ರ ಧ್ವಜವೇರಿಸಿದ ಘಟನೆಗಳು ದಾಖಲೆಯಾಗಿಲ್ಲ. ಇದಕ್ಕೆ ಸಾಕ್ಷಿಯಾಗಿ ಅವರ ಊರಿನ ಘಟನೆಯನ್ನು ಹೇಳುವರು. ರಾಯಚೂರಿನ ಪಶ್ಚಿಮಕ್ಕೆ ೩೦ ಕಿ.ಮೀ. ದೂರದಲ್ಲಿ ಹೆಂಬೆರಾಳು ಗ್ರಾಮ. ನಾಟಕ ಬಯಲಾಟ ತಾಳಮದ್ದಳೆ ತತ್ವಪದಗಳಿಗೆ ಹೆಂಬೆರಾಳು ಸುತ್ತಮುತ್ತಲಿನ ಹಳ್ಳಿಗಳ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರ. ಕೆ. ಸೂಗಣ್ಣ ಎಂಬ ಶ್ರೀಮಂತ ಕರ್ಮವೀರ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆ ತರಿಸುತ್ತಿದ್ದ. ಆಗಿನ ಕಾಲಕ್ಕೆ ಈ ಪತ್ರಿಕೆ ತರಿಸುವವರನ್ನು, ಓದುವವರನ್ನು ಸಂಶಯ ದೃಷ್ಟಿಯಿಂದ ಆಡಳಿತವು ನೋಡುತ್ತಿತ್ತು. ಆದರೂ ದಿಟ್ಟ ಸೂಗಣ್ಣ ರಂಗಣ್ಣ ಮತ್ತು ಶಾಂತರಸ ಕೂಡಿ ಸೂಗಣ್ಣನ ಮನೆಯ ಮೇಲೆ ಧ್ವಜವೇರಿಸಿದ್ದಾರೆ. ಮುಂದಿನ ಕಥೆ ಅವರ ಬಾಯಿಯಿಂದಲೇ ಕೇಳಿ "ನಾವು ಧ್ವಜವೇರಿಸಿದ ಸುದ್ದಿ ಪೋಲೀಸರಿಗೆ ಗೊತ್ತಾಯಿತು. ಸಾಂತ್ರಸ್‌ಮಾಸ್ತರ್ ಯಾರು? ಅವನು ಹೆಂಬೆರಾಳಿನಲ್ಲಿ ಧ್ವಜ ಹಾರಿಸಿದ್ದಾನೆ. ಅವನನ್ನು ನಮ್ಮ ವಶಕ್ಕೆ ಕೊಡಿರಿ" ಎಂದು ಕೇಳಿದರು. ಅಂತಹವರು ಯಾರೂ ಇಲ್ಲ ಹೋಗಿರಿ ಎಂದು ಅವರ ಹಮದರ್ದ್ ಸ್ಕೂಲಿನ ಮುಖ್ಯೋಪಾಧ್ಯಾಯರಾದ ಷಾಲಿ ಸಾಹೇಬರು ಹೇಳಿದರು. ಮತ್ತೆ ನಾಲ್ಕನೆಯ ದಿನ ಸಂಯುಕ್ತ ಕರ್ನಾಟಕದಲ್ಲಿ ಹೆಂಬೆರಾಳದಲ್ಲಿ ಮೂವರು ತ್ರಿವರ್ಣ ಧ್ವಜ ಹಾರಿಸಿದರೆಂದು ನಮ್ಮ ಹೆಸರುಗಳೊಂದಿಗೆ ಸುದ್ದಿ ಪ್ರಕಟವಾಗಿತ್ತು. ಹುಚ್ಚಾಚಾರ್ಯ ಮಾಸ್ತರರು ಈ ಸುದ್ದಿ ಕಳಿಸಿದ್ದರಂತೆ. ಇಬ್ಬರು ಪೋಲೀಸರು ನನ್ನ ರೂಮಿಗೆ ಬಂದು ಸದರ್ ಬಜಾರ ಪೋಲೀಸ್ ಸ್ಟೇಷನ್ನಿಗೆ ಹಿಡಿದುಕೊಂಡು ಹೋದರು. ಅಲ್ಲಿ ಅಮೀನ ಸಾಬನ ಜೊತೆಗೆ ನನಗೆ ಪರಿಚಯವಿದ್ದ ಅನೇಕ ರಜಾಕಾರರು ಇದ್ದರು. ನನ್ನನ್ನು ನೋಡಿದ ಕೂಡಲೆ ಅವರು ಗದ್ದಾರ್ ಸುವ್ವರ್ ಎಂದು ಬಯ್ದರು. ಒಂದು ಬೂಟುಕಾಲಿನ ಏಟು ಟೊಂಕಕ್ಕೆ ಬಿತ್ತು. ಅಷ್ಟರಲ್ಲಿ ಅಮೀನಸಾಬ ನನ್ನನ್ನು ಹಿಂದಿನ ರೂಮಿಗೆ ಒಯ್ದು ಕೂಡಿಸಿದ. ಒಂದು ತಾಸಿನ ಬಳಿಕ ಬಂದು ಷಾಲಿ ಸಾಹೇಬರ (ಅವರ ಹೆಡ್ಮಾಸ್ತರು) ಸಲುವಾಗಿ ನಿನ್ನನ್ನು ಬಿಡುತ್ತೇನೆ. ನೀನು ಹೋಗಬಹುದು ಎಂದು ಹೇಳಿದ. ಷಾಲಿ ಸಾಹೇಬರು

ಮುಸಲ್ಮಾನರಾಗಿದ್ದರೂ ಜಾತ್ಯಂಧರಾಗಿರಲಿಲ್ಲ. ರಾಷ್ಟ್ರವಾದಿ ವಿಚಾರಗಳನ್ನು ಮೆಚ್ಚುವವರಾಗಿದ್ದರು. ಪಂಡಿತ ತಾರಾನಾಥರಾಯರು ಸ್ಥಾಪಿಸಿದ ಹಮದರ್ದ್ ಹೈಸ್ಕೂಲಿನ ಹೆಡ್ಮಾಸ್ತರ ಆಗಿರುವದರಿಂದ ತಾರಾನಾಥರಾಯರ ವಿಚಾರ ಅವರಲ್ಲಿ ಬಂದಿರಬೇಕೆಂಬ ನನ್ನ ಭಾವನೆಯಾಗಿತ್ತು. ಈ ಕಾರಣದಿಂದಲೇ ಶಾಂತರಸರ ಗುಂಪಿನವರು ಬಂಧಿತರಾಗಲಿಲ್ಲ. ಜೈಲು ಹೋಗಲಿಲ್ಲ. (ಅವರ ಬರವಣಿಗೆ ಆಗಸ್ಟ್ ೧೯೯೭ ರಲ್ಲಿ ಪ್ರಜಾವಾಣಿಯಲ್ಲಿ ಪ್ರಕಟ)

### ತಿಮ್ಮಾಪುರಪೇಟೆಯ ಗುಡಿಸಲುಗಳಿಗೆ ಬೆಂಕಿ

೧೯೪೭ ಆಗಸ್ಟ್ ೨೬ ರಂದು ರಜಾಕಾರ ಗುಂಪು, ಕಾಂಗ್ರೆಸ್ ವಿರೋಧಿ ಘೋಷಣೆ ಕೂಗುತ್ತ ನಿಜಾಮನು ಚಂದ್ರ–ಸೂರ್ಯರಷ್ಟೆ ಸತ್ಯ, ಅವರು ದೇವದೂತರು, ಸೈತಾನಿಗಳನ್ನು ಓಡಿಸಲು ಬಂದಿದ್ದಾರೆ ಎಂದು ನಿಜಾಮನ ಉದ್ಘೋಷ ಹಾಕುತ್ತ ರಾಯಚೂರು ನಗರದ ಬೀದಿ ಬೀದಿಗಳಲ್ಲಿ ಕೂಗಿ ಮೆರವಣಿಗೆ ತೆಗೆದರು. ಇದರ ಉದ್ದೇಶವು ನಿಜಾಮನ ವಿರುದ್ಧ ಯಾರೂ ದನಿ ಎತ್ತಬಾರದೆಂದು ತಾಕೀತು ಮಾಡುವುದು ಆಗಿತ್ತು.

ಅದೇ ದಿನ ಮುಸಲ್ಮಾನರಿಗೂ ತಿಮ್ಮಾಪೂರಪೇಟೆಯ ಜನರಿಗೂ ಇದೆ ಕಾರಣಕ್ಕಾಗಿ ಸಣ್ಣ ಪುಟ್ಟ ಜಗಳವಾಯಿತು. ಆಗ ರಜಾಕಾರರು ರಾತ್ರೋ ರಾತ್ರಿ ಬೆಂಕಿಯಿಟ್ಟರು. ೬೦ ಗುಡಿಸಲುಗಳು ಭಸ್ಮವಾದವು. ನಗರದಲ್ಲಿ ಭಾರಿ ಪ್ರಕ್ಷುಬ್ದ ಪರಿಸ್ಥಿತಿ ಉಂಟಾಯಿತು. ಈ ಸಂದರ್ಭದಲ್ಲಿ ಬೆಂಕಿಯಿಟ್ಟವರನ್ನು ಬಿಟ್ಟು ಇದನ್ನು ಪ್ರತಿರೋಧಿಸಿದ ಗಾಣಧಾಳ ನಾರಾಯಣಪ್ಪ, ಮುನ್ನೂರು ಗಂಗನಗಾರ ನಾಗಣ್ಣ, ತಿಮ್ಮಾಪೂರ ಪೇಟೆಯ ದಾಸಪ್ಪ, ಪೂಜಾರ ಹನುಮಂತಪ್ಪ, ಜಿ. ಮದ್ದುರಾವ ವಕೀಲ, ಡಿ. ಮಾಣಿಕರಾವ, ಮುನ್ನೂರು ತಪ್ಪಡಿ ಭೀಮಯ್ಯ, ತಿಮ್ಮಯ್ಯ ಗುಲ್ದಾಸ ಇವರನ್ನು ಬಂಧಿಸಲು ಪೋಲೀಸರು ಬಂದರು. ಈ ಗದ್ದಲದಲ್ಲಿ ಗಾಣಧಾಳ ನಾರಾಯಣಪ್ಪ ಹಾಗೂ ಮುನ್ನೂರು ನಾಗಣ್ಣ ತಪ್ಪಿಸಿಕೊಂಡು ಊರುಬಿಟ್ಟು ಓಡಿದರು. ತಮ್ಮ ವೈಯಕ್ತಿಕ ಕಾರಣಕ್ಕಾಗಿ ಹಾಗೂ ಸಂಘಟನೆಯ ಉದ್ದೇಶಕ್ಕಾಗಿ ಜೈಲು ಸೇರದೆ ಬಿಟ್ಟರು ಎಂದು ರಾ. ಗು. ಜೋಷಿಯವರು 'ನೆನಪಿನ ಪುಟ' ಪುಸ್ತಕದಲ್ಲಿ ಹಾಗೂ ಮುನ್ನೂರು ನಾಗಣ್ಣನವರ ಸಂದರ್ಶನದಲ್ಲಿ ದಾಖಲಿಸಿದೆ. ಮುಂದೆ ೧–೨ ದಿನದಲ್ಲಿ ಭಾರಿ ಶ್ರೀಮಂತರಾಗಿದ್ದ ಗುಲ್ದಾಸ ತಿಮ್ಮಯ್ಯನವರನ್ನು ವಿಚಾರಣೆ ಹಂತದಲ್ಲಿಯೇ ಬಂಧನದಿಂದ ಮುಕ್ತಮಾಡಿದರು.



### ಧ್ವಜ ದಿನಾಚಾರಣೆ–ವಿದ್ಯಾರ್ಥಿಗಳ ಬಂಧನ:

ಕಾಂಗ್ರೆಸ್ ನೀಡಿದ ಕರೆಯಂತೆ ೨ನೆ ಅಕ್ಟೋಬರ್ ೧೯೪೭ ರಂದು ವಿದ್ಯಾರ್ಥಿಗಳೆಲ್ಲ ಧ್ವಜ ದಿನಾಚರಣೆಯನ್ನು ಗೈಯಲು ಗುಪ್ತವಾಗಿ ಸಂದೇಶನೀಡಿ, ರೈಲ್ವೇ ಸ್ಟೇಷನ್ನಿನ ಹತ್ತಿರದಿಂದ ಬೆಳಗ್ಗೆ ೧೦–೩೦ಕ್ಕೆ ಈಗಿನ ನಗರಸಭೆ ಮಾರ್ಗವಾಗಿ ಸದಾಶಿವರಾಜ ಪುರೋಹಿತ ಅವರ ನಾಯಕತ್ವದಲ್ಲಿ ೩೨ ವಿದ್ಯಾರ್ಥಿಗಳ ಗುಂಪೊಂದು ತ್ರಿರಂಗಿ ಧ್ವಜ ಹಿಡಿದು ಮೆರವಣಿಗೆಯೊಂದಿಗೆ ವಂದೇಮಾತರಂ ಹಾಡು ಹಾಡುತ್ತಾ ಹೊರಟಿತು.

### ಈ ಸತ್ಯಾಗ್ರಹದಲ್ಲಿ ಭಾಗವಹಿಸಿದವರು:

(೧) ಸದಾಶಿವ ರಾಜಪುರೋಹಿತ (ನಾಯಕರು) (೨) ರಾಮರಾವ್ (೩) ವಿರುಪಾಕ್ಷಪ್ಪ, (೪) ಜಗನ್ನಾಥ ರಾವ್ (೫) ಯಲಗುರ್ದಾಚಾರ್ಯ (೬) ಪಿ. ಸೂಗಣ್ಣ (೭) ವೀರನಗೌಡ (೮) ಇಲ್ಲೂರು ಜಯರಾಮಪ್ಪ ಗುಪ್ತ (೯) ಆರ್. ಬಸವಣ್ಣ ಗುಪ್ತ ತಂದೆ ಜಂಬಣ್ಣ ಗುಪ್ತ (೧೦) ಇಲ್ಲೂರು ನರಸಿಂಗಪ್ಪ ಗುಪ್ತ ಬಿ. (೧೧) ಜೆ. ಶ್ರೀನಿವಾಸ ರಾವ್ ತಂದೆ ಗೋವಿಂದ ರಾವ್ (೧೨) ಅಡವಿರಾವ್ ತಂದೆ ಕಿಷನ್ ರಾವ್ (೧೩) ಹರದಾರ ಬಾಬುರಾವ (೧೪) ಕಾಶಿರಾವ್ ಪಾಟೀಲ್ (ಕಾಶಿ ವಿಶ್ವನಾಥ) (೧೫) ಕಿಷನ್‌ರಾವ್ ತಂದೆ ಗುರಾಚಾರಿ (೧೬) ಪಂಪಣ್ಣ ತಂದೆ ನಾಗಣ್ಣ (೧೭) ಬಸನಗೌಡ ತಂದೆ ಬಸಪ್ಪ (೧೮) ಜಗನ್ನಾಥರಾವ್ ತಂದೆ ನರಸಿಂಗರಾವ್ (೧೯) ನಾರಾಯಣರಾವ್ ತಂದೆ ವೆಂಕೋಬಾಚಾರಿ (೨೦) ನಾಗಣ್ಣ ತಂದೆ ಶೇಷಯ್ಯ (೨೧) ವೀರಭದ್ರಪ್ಪ ತಂದೆ ಬಸವಪ್ಪ (೨೨) ಹನುಮಂತರಾವ್ ತಂದೆ ಮಾಣಿಕರಾವ್ (೨೩) ಗುರಾಚಾರಿ ತಂದೆ ಭೀಮಾಚಾರಿ (೨೪) ಶ್ರೀನಿವಾಸ ತಂದೆ ಭೀಮಾಚಾರ್ಯ (೨೫) ಎಂ. ಪಂಪಣ್ಣ ತಂದೆ ಚನ್ನಪ್ಪ (೨೬) ಅಣ್ಣಾರಾವ್ ತಂದೆ ಮದ್ದುರಾವ್ (೨೭) ಕೆ. ಪಮರಪ್ಪ ತಂದೆ ದೊಡ್ಡ ಬಸಪ್ಪ (೨೮) ಆದಿ ರಾಜಶೇಖರ ತಂದೆ ಬಸಣ್ಣ (೨೯) ಎಂ. ಪರ್ವತರೆಡ್ಡಿ ತಂದೆ ಬಸಣ್ಣ (೩೦) ರಂಗಾರಾವ್ ತಂದೆ ರಾಮರಾವ್ ಇವರ ಜೊತೆಗೆ ಅನೇಕ ವಿದ್ಯಾರ್ಥಿಗಳಿದ್ದರು.

ಇವರು ಈಗಿನ ರೈಲ್ವೇ ಸ್ಟೇಷನ್ನಿನ ಹತ್ತಿರದಿಂದ ಹೊರಟು ನಗರಸಭೆಯ ಗಾರ್ಡನ ಮುಖಾಂತರ ಮನವಿ ಅರ್ಪಿಸಲು ಸಾಥ್ ಕಛೇರಿಗೆ ಹೊರಟಿದ್ದರು. ಇವರನ್ನು ಸಾಥ್ ಕಛೇರಿಯ ಹತ್ತಿರ ತಡೆದು ಸದರ ಬಜಾರ ಪೋಲೀಸ್ ಸ್ಟೇಷನ್ನಿಗೆ ಒಯ್ದು ಅಲ್ಲಿಂದ ಕಾರಗೃಹಕ್ಕೆ ತಂದರು. ಶಾಲಾ

ವಿದ್ಯಾರ್ಥಿಗಳಾಗಿದ್ದರಿಂದ ಮಾಫಿನಾಮ ಬರೆದುಕೊಟ್ಟರೆ ಬಿಡುವುದಾಗಿ ಆಸೆ ತೋರಿದರು. ಈ ತರುಣ ಸ್ವಾತಂತ್ರ್ಯ ಯೋಧರು ಅದನ್ನು ನಿರಾಕರಿಸಿದರು. ಸ್ವತಃ ನ್ಯಾಯಾಧೀಶರೇ ಬಂದು ಇವರಿಗೆ ಬುದ್ಧಿ ಹೇಳಿ ಕ್ಷಮಾಪತ್ರಕ್ಕಾಗಿ ವಿನಂತಿಸಿದರು. ಆದರೆ ಇವರು ಸಾರಾಸಗಟಾಗಿ ನಿರಾಕರಿಸಿದರು. ಇವರಲ್ಲಿ ಮಲ್ಲಣ್ಣ ಹಾಗೂ ಕೃಷ್ಣಮೂರ್ತಿ ಎಂಬುವರನ್ನು ಬಿಟ್ಟು ಮೇಲ್ಕಾಣಿಸಿದ ೩೦ ಜನರಿಗೆ ೧೫ ದಿನಗಳ ಪೊಲೀಸ್ ಕಸ್ಟಡಿ ಮುಗಿದ ಮೇಲೆ ಒಂದು ವಾರ ಶಿಕ್ಷೆಯಾಯಿತು. ಆರ್ಯಭವನದ ಮಾಲಿಕ ಮಾಧವ ಅಯ್ಯರ್ ಊಟದ ವ್ಯವಸ್ಥೆ ಮಾಡಿದರು. ಸದಾಶಿವ ರಾಜಪುರೋಹಿತರ ಹೇಳಿಕೆಯಂತೆ ಮುನ್ನೂರು ಗಂಗನಗಾರ ನಾಗಣ್ಣನವರು ಜೈಲಿನಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದರೆಂದು ತಿಳಿದುಬರುತ್ತದೆ.

ಮಾಲೀಗೌಡರು ರಾಜೀನಾಮೆ ಪಡೆದು ನಿಜಾಮ ಆಡಳಿತಕ್ಕೆ ದೊಡ್ಡ ಅಸಹಕಾರವನ್ನು ವ್ಯಕ್ತಪಡಿಸಿ, ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಭೀಮಸೇನರಾವ್ ಪಟವಾರಿ ಗುಂಜಳ್ಳಿ, ಪೊಲೀಸ್ ಪಾಟೀಲ ಈರಾರೆಡ್ಡಿ, ಪುಚ್ಚಲದಿನ್ನಿ ರಾಘವೇಂದ್ರರಾವ್ ಪಟವಾರಿ, ಕೆರೆಬೂದೂರು ನಾಗರೆಡ್ಡೆಪ್ಪ ಮಾಲೀಪಾಟೀಲ, ಪೊಲೀಸ್ ಪಾಟೀಲ ಭೀಮರೆಡ್ಡಿ ಜಾಡಲದಿನ್ನಿ, ಸೇತುರಾಮ ಪಟವಾರಿ, ಲಿಂಗನಖಾನದೊಡ್ಡಿ ರಾಘವೇಂದ್ರರಾವ್ ಪಟವಾರಿ, ಕೊಪ್ರೇಶರಾವ ಪಟವಾರಿ ಗುಂಜಳ್ಳಿ ಮೊದಲಾದವರು ರಾಜೀನಾಮೆ ಸಲ್ಲಿಸಿದವರಲ್ಲಿ ಪ್ರಮುಖರು.

## ಆರ್ಯಭವನದ ಮೇಲೆ ಧ್ವಜ

ರಾಯಚೂರು ನಗರದಲ್ಲಿ ಆರ್ಯಭವನ ಹೋಟೆಲ್ ಶುಚಿ–ರುಚಿಗಳಿಗಾಗಿ ಹೆಸರಾಗಿತ್ತು. ಅದರ ಮಾಲೀಕರು ಮಾಧವ ಅಯ್ಯರವರು. ಅವರು ಸ್ವಾತಂತ್ರ್ಯ ಪ್ರೇಮಿಗಳು, ಸ್ವಾತಂತ್ರ್ಯ ಯೋಧರ ಮೇಲೆ ಸಹಾನುಭೂತಿಯುಳ್ಳವರು, ಇವರ ಮೇಲೆ ಸದಾ ಪೊಲೀಸರ ಕಣ್ಣು ಇತ್ತು. ಇವರು ತಮ್ಮ ಹೋಟೆಲ್ ಛಾವಣಿಯ ಮೇಲೆ ೧೯೪೭ ಆಗಸ್ಟ್ ೧೫ ರಂದು ಧ್ವಜವೇರಿಸಿದರು. ಇವರ ಧೈರ್ಯ ಮತ್ತು ಸಾಹಸವನ್ನು ಮೆಚ್ಚತಕ್ಕದ್ದು. ಸ್ವಾತಂತ್ರ್ಯ ಯೋಧರಿಗೆ ಸಹಾಯ ಮಾಡುವವರು ಎಂಬ ನೆಪದಲ್ಲಿ ಇವರನ್ನು ಕಾಡಿ, ಬಂಧಿಸಿದರು. ಇದರಿಂದ ಹೋಟೆಲ್ ಉದ್ಯಮಕ್ಕೆ ತುಂಬಾ ನಷ್ಟವಾಯಿತು. ಮುಂದೆ ಕೆಲ ದಿನಗಳಲ್ಲಿಯೇ ಬಿಡುಗಡೆಯಾಯಿತು.



## ಬಿಡಾಡಿ ದನಗಳ ಮೇಲೆ ಘೋಷಣೆ

ಅಡವಿರಾವ ಫಡ್ನವೀಸರಿಗೆ ಗಂಜಿನಲ್ಲಿ ದಲಾಲಿ ಅಂಗಡಿಯಿತ್ತು. ೧೯೪೨ರಿಂದಲೂ ರಾಯಚೂರಿನಲ್ಲಿ ನಡೆದ ಹೋರಾಟಗಳಲ್ಲಿ ಒಂದಿಲ್ಲೊಂದು ಪಾತ್ರವಹಿಸಿದ್ದರು. ಹೋರಾಟ ತೀವ್ರವಾದ ಈ ಸಂದರ್ಭದಲ್ಲಿ ಗಂಜಿನಲ್ಲಿ ರಾತ್ರಿ ಬಿಡಾರ ಮಾಡುತ್ತಿದ್ದ ೧೦೦–೨೦೦ ಬಿಡಾಡಿ ದನಗಳ ಮೇಲೆ ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ನಿಜಾಮನ ವಿರುದ್ಧ ಘೋಷಣೆಗಳನ್ನು ಬರೆಯಿಸಿದರು. ಬೆಳಿಗ್ಗೆ ಅವು ಹೊರಟಾಗ ಪೊಲೀಸರಿಗೆ ಇರಿಸುಮುರಿಸು. ಪೊಲೀಸರು ಅವುಗಳನ್ನು ಪ್ರಯಾಸಪಟ್ಟು ಹುಡುಕಿ ಸದರ ಬಜಾರ ಠಾಣೆಗೆ ಹೊಡೆದುಕೊಂಡು ಬಂದರು. ಬಳಸಿದ ಮಸಿ ಗಂಜಿನವರು ಉಪಯೋಗಿಸುತ್ತಿದ್ದುದಾಗಿತ್ತು. ಇದರ ಸಂಚು ಫಡ್ನವೀಸರದೆಂದು ಭಾವಿಸಿ ಪೊಲೀಸರು ಅವರ ಮನೆಗೆ ನುಗ್ಗಿ ಲೂಟಿ ಮಾಡಿದರು. ಯಾರೂ ಸಿಗಲಿಲ್ಲ. ದನಗಳ ಮೇಲೆ ಬರೆದ ಹುಡುಗರಲ್ಲಿ ಪಟ್ವಲಚಿಂತಿ ರಾಘವೇಂದ್ರ ಮಾಸ್ತರು ಇಂದಿಗೂ ನಕ್ಕು ನಗಿಸಿ ಈ ಘಟನೆ ಹೇಳುತ್ತಾರೆ.

## ಕಲ್ಲೂರಿನಲ್ಲಿ ಬಂಧನ

ಮಾನವಿ ತಾಲೂಕಿನ ಕಲ್ಲೂರಿನಲ್ಲಿ ಮಲ್ಲಿಕಾರ್ಜುನಪ್ಪ ಸಾಹು, ಪ್ರಹ್ಲಾದರಾವ ದೇಸಾಯಿ, ಶ್ರೀನಿವಾಸರಾವ ಸರಾಫ್ ಇವರನ್ನು ಸತ್ಯಾಗ್ರಹ ಮಾಡಿದರೆಂಬ ಆಪಾದನೆ ಮೇಲೆ ಬಂಧಿಸಿದರೆ ಬೂದೆಯ್ಯ, ಶಾಂತಣ್ಣ ಕ್ಯಾದಿಗ್ಗೇರಿ ಶಂಕರಪ್ಪ ಚಮಲಾಪುರ, ಜಾಲಹಳ್ಳಿ ಶಂಕರಪ್ಪ ಇವರು ಸತ್ಯಾಗ್ರಹ ಮಾಡಲು ಪ್ರಚೋದನೆ ನೀಡಿದ್ದಾರೆಂಬ ಕಾರಣದ ಮೇಲೆ ಬಂಧಿಸಿ ಮಾನವಿ ಜೈಲಿಗೆ ಕಳುಹಿಸಿದರು.

೧೯೪೨ರ ಚಳುವಳಿಯಲ್ಲಿ ರಾ. ಗು. ಜೋಷಿಯವರಿಗೆ ಸತ್ಯಾಗ್ರಹ ಮಾಡಿ ಜೈಲು ಸೇರಲು ಕಾಂಗ್ರೆಸಿನ ಹಿರಿಯರು ಅಪ್ಪಣೆ ನೀಡಿರಲಿಲ್ಲ. ಎಲ್ಲರೂ ಬಂಧನಕ್ಕೊಳಗಾದರೆ ಇಲ್ಲಿ ಜನ ಸಂಘಟಿಸಿ ಕೆಲಸ ಮಾಡುವವರಾರು? ಎಂಬ ಪ್ರಶ್ನೆ ಅವರ ಮುಂದೆ ಇಟ್ಟಿದ್ದರು. ನಾಯಕತ್ವವೇ ಕಣ್ಮರೆಯಾಗಿ ಹೋರಾಟ ಅನಾಥವಾಗಬಹುದಾಗಿತ್ತು. ಆದಕಾರಣ ಅನೇಕರನ್ನು ಹಿರಿಯ ನಾಯಕರು ತಡೆದಿದ್ದರು. ಆದರೆ ರಾ. ಗು. ಜೋಷಿಯವರು ಇದಕ್ಕೆ ಅನಿವಾರ್ಯವಾಗಿ ಸಮ್ಮತಿಸಿದರೂ ಅವರಲ್ಲಿ ದೇಶಕ್ಕಾಗಿ ಸತ್ಯಾಗ್ರಹ ಮಾಡಬೇಕು ಜೈಲು ಸೇರಬೇಕು ಎನ್ನುವ ಮಹತ್ವದ ಆಕಾಂಕ್ಷೆ ಗರಿಗೆದರಿತ್ತು. ಸತ್ಯಾಗ್ರಹ ಮಾಡಿ ಜೈಲು

ಸೇರುವವರೆಗೂ ಗಡ್ಡ ಬೋಳಿಸದೆ, ಕೇಶಮುಂಡನೆ ಮಾಡಿಸದೆ ಜಟಾಧಾರಿ ಯಾದರು.

### ಬಂಧನಕ್ಕೊಳಗಾದ ಪತ್ರಕರ್ತರು

ಎಂ. ನರಸಿಂಗರಾವ್ (ಸಂಪಾದಕರು ರೈಯಟ್) ಎ. ಹೆಚ್. ದೇಸಾಯಿ (ಫ್ರೀಪ್ರೆಸ್ ಜರ್ನಲ್, ನ್ಯಾಷನಲ್ ಹೆರಾಲ್ಡ್, ದಿ ಬ್ಲಿಜ್), ಶ್ರೀ ರಾಮ ಶರ್ಮ (ಹಿಂದುಸ್ತಾನ ದೆಹಲಿ), ಕೃಷ್ಣಮಾಚಾರ್ಯ (ಆಂಧ್ರ ಪತ್ರಿಕಾ), ನಾಗರಾಜರಾವ್ (ಅಸೋಶಿಯೇಟೆಡ್ ಪ್ರೆಸ್ ಆಫ್ ಇಂಡಿಯಾ), ರಾ. ಗು. ಜೋಷಿ (ಸಂಯುಕ್ತ ಕರ್ನಾಟಕ), ರಾಯಚೂರಿನ ಎಸ್. ಹನುಮಂತರಾವ್, ಗುಲ್ಬರ್ಗದ ದತ್ತಾತ್ರೇಯರಾವ್ ಅವರಾದಿ (ನಾಗರಿಕ ಸಾಪ್ತಾಹಿಕ ಗುಲ್ಬರ್ಗ) ಮುಂತಾದವರು ಬಂಧನಕ್ಕೊಳಗಾದ ಪತ್ರಕರ್ತರಾಗಿದ್ದರು. ರಾಯಚೂರಿನಲ್ಲಿ ಪತ್ರಿಕೆ ಹಂಚುತ್ತಿದ್ದ ರಾಮಕೃಷ್ಣ ಶೆಟ್ಟಿ ಬಂಧನಕ್ಕೊಳಗಾದರು.

### ಪತ್ರಕರ್ತ ಶೋಯುಬುಲ್ಲಾಖಾನನ ಕೊಲೆ

ಪ್ರಜಾ ಪ್ರಭುತ್ವವಾದಿ ರಾಷ್ಟ್ರೀಯ ವಿಚಾರ ಹೊಂದಿದ್ದ ಮುಸ್ಲಿಮರನ್ನೂ ರಜಾಕಾರರು ಬಿಡಲಿಲ್ಲ. ಇಮ್ರೋಜ್ ದಿನಪತ್ರಿಕೆಯ ಸಂಪಾದಕರಾಗಿದ್ದ ಶೋಯುಬುಲ್ಲಾಖಾನ ಸಾರ್ವಜನಿಕ ಅಭಿಪ್ರಾಯಗಳನ್ನು, ರಾಷ್ಟ್ರೀಯ ಬದುಕಿನ ಅವಶ್ಯಕತೆಯನ್ನು ಪ್ರತಿಬಿಂಬಿಸುವ ಲೇಖನಗಳನ್ನು ಬರೆಯುತ್ತಾ ಸಂಸ್ಥಾನದ ಅಭಿವೃದ್ಧಿ ದೃಷ್ಟಿಯಿಂದ ಭಾರತದ ಯೂನಿಯನ್ ಸೇರಬೇಕೆಂದು ಒತ್ತಾಯಿಸುತ್ತಿದ್ದನು. ರಾಷ್ಟ್ರೀಯವಾದಿ ಮುಸ್ಲಿಂ ತರುಣರನ್ನು ಇವನು ಪ್ರೋತ್ಸಾಹಿಸುತ್ತಿದ್ದನು. ಆದಕಾರಣ ರಜಾಕಾರರು ಇವರನ್ನು ೨೨.೦೮.೧೯೪೮ ರಂದು ಪತ್ರಿಕೆಯ ಕಛೇರಿಯಿಂದ ಮನೆಗೆ ಹೋಗುತ್ತಿದ್ದಾಗ ಅವನ ಮನೆಯ ಮುಂದೆಯೆ ಇವನ ಕೈ ಕಾಲು ಕತ್ತರಿಸಿ ಕ್ರೂರವಾಗಿ ಕೊಂದರು. ಇದೇ ಸಂದರ್ಭದಲ್ಲಿ ೭೦೦ ಕ್ಕೂ ಮಿಕ್ಕಿ ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು. ಮಂತ್ರಿಗಳಾದ ಜಿ. ರಾಮಚಾರ್ ರಾಜೀನಾಮೆ ನೀಡಿದರು. ವ್ಯಾಪಾರಸ್ಥರು ಅಂಗಡಿ ಮುಚ್ಚಿ ತಮ್ಮ ಪ್ರತಿಭಟನೆ ತೋರಿದರು.

❑

## ಅಧ್ಯಾಯ–೬
## ಭೂಗತ ಚಟುವಟಿಕೆಗಳು

### ಶಿಬಿರಗಳ ಸ್ಥಾಪನೆ

ರಜಾಕಾರರ ದೌರ್ಜನ್ಯಗಳು ಅತ್ಯಾಚಾರಗಳನ್ನು ತಡೆಯಲು ಭಾರತ ಸರ್ಕಾರವನ್ನು ಕೇಳಿಕೊಂಡಾಗ ನೀವೇ ಎದುರಿಸಬೇಕೆಂಬ ಸಲಹೆ ನೀಡಿದರು. ಬೇಕಾದರೆ ಅಲ್ಪಸ್ವಲ್ಪ ಸಹಾಯ ಮಾಡಬಹುದು. ಇಂಡಿಪೆಂಡೆಂಟ್ ಆ್ಯಕ್ಟ್‌ನ ಅನ್ವಯ ನೇರ ಪ್ರವೇಶ ಸಾಧ್ಯವಿಲ್ಲವೆಂದು ಕೈಚೆಲ್ಲಿತು. ನಮ್ಮ ಗಡಿಗಳಲ್ಲಿ ದಾಳಿ ಮಾಡಿದರೆ ನಾವು ಯುದ್ಧ ಮಾಡಬಹುದೆಂದರು.

ಆಗ ಸ್ವಾಮಿ ರಮಾನಂದ ತೀರ್ಥರು, ನಿಜಲಿಂಗಪ್ಪನವರು, ಆರ್. ಆರ್. ದಿವಾಕರರು ಮುಂತಾದ ೫೦೦ ಜನ ಗದಗಿನಲ್ಲಿ ಸೇರಿ ಭೂಗತ ಚಳುವಳಿ ಕೈಕೊಳ್ಳಲು ನಿರ್ಧರಿಸಿದರು. ಇದು Tit for Tat ಹೊಡೆತಕ್ಕೆ ಹೊಡೆತ ಆಗಿತ್ತು. ಗದಗ ಮುಖ್ಯ ಕಛೇರಿ ಎಂದು ನಿರ್ಧರಿಸಲ್ಪಟ್ಟಿತು. ಆಗ ಈಗಿನ ವಿಭಜಿತ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ಶಿಬಿರ, ಮಂತ್ರಾಲಯ ಶಿಬಿರ ಹಾಗೂ ಚಳ್ಳೆ ಕೂಡ್ಲೂರು ಶಿಬಿರಗಳನ್ನು ಸ್ಥಾಪಿಸಿಕೊಂಡು ಭೂಗತ ಚಟುವಟಿಕೆಗಳು ಸೈನಿಕರ ಕೂಟಯುದ್ಧದಂತೆ ನಡೆಯಿತು. ಅಲ್ಲಿಯ ಜನರಿಗೆ ರಕ್ಷಣೆ ಹಾಗೂ ಎಚ್ಚರಿಕೆ ಕೊಡುವ ಕಾರ್ಯಕ್ರಮ ಹಾಕಿಕೊಂಡರು. ಪ್ರಮುಖವಾಗಿ ತುಂಗಭದ್ರಾ ಶಿಬಿರಕ್ಕೆ ಸಂಗಮ ಹುಚ್ಚಾಚಾರ, ಮಂತ್ರಾಲಯ ಶಿಬಿರಕ್ಕೆ ಕಸಬೆ ಪಾಂಡುರಂಗರಾವ ಹಾಗೂ ಚಳ್ಳೆ ಕೂಡ್ಲೂರು ಶಿಬಿರಕ್ಕೆ ಬೆಟ್ಟದೂರು ಶಂಕರಗೌಡರನ್ನು ನಿಯಮಿಸಲಾಯಿತು.

ಈ ಮೂರು ಶಿಬಿರಗಳು ಮುಖ್ಯವಾಗಿ ರಜಾಕಾರರಿಂದ ನಾಗರಿಕರ ಮೇಲೆ ನಡೆಯುತ್ತಿದ್ದ ದಾಳಿ, ಹಿಂಸೆ, ದರೋಡೆ ಹಾಗೂ ಸ್ತ್ರೀಯರ ಮೇಲೆ

ನಡೆಯುವ ಅತ್ಯಾಚಾರಗಳನ್ನು ನಿಲ್ಲಿಸುವುದಾಗಿತ್ತು. ನೂರಾರು ಜನ ಹೋರಾಟಗಾರರಿಗೆ ಊಟ, ವಸತಿ, ಜೊತೆಗೆ ಹೋರಾಡಲು ಶಸ್ತ್ರಾಸ್ತ್ರ ಸಂಪಾದಿಸುವುದು ಬಹಳ ಕಠಿಣವಾಗಿತ್ತು.

ಮಂತ್ರಾಲಯ ಶಿಬಿರದವರಿಗೆ ಊಟ ವಸತಿಗಾಗಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಗಳಲ್ಲಿದ್ದು, ನದಿ ದಾಟಿಕೊಂಡು ಬಂದು ಜನರಿಗೆ ಧೈರ್ಯಹೇಳಿ ರಜಾಕಾರರಿಗೆ ಬುದ್ಧಿ ಕಲಿಸಲು ಹೋರಾಟ ಮಾಡಿದರು. ಉಳಿದ ಎರಡು ಶಿಬಿರದವರು ತಮ್ಮ ವ್ಯವಸ್ಥೆಯನ್ನು ಜನರ, ದಾನಿಗಳ, ರೈತರ ಸಹಾಯದಿಂದ ನಡೆಸಿದ್ದು ಇತಿಹಾಸ.

## (೧) ತುಂಗಭದ್ರಾ ಪೊಲೀಸ್ ಚೌಕಿಯ ಮೇಲೆ ದಾಳಿ

೧೯೪೮ ಜೂನ್ ತಿಂಗಳಲ್ಲಿ ತುಂಗಭದ್ರಾ ಪೋಲೀಸ್ ಚೌಕಿಯ ಮೇಲೆ ರಾತ್ರೋರಾತ್ರಿ ದಾಳಿ ಮಾಡಿ ಪೊಲೀಸರ ಶಸ್ತ್ರಾಸ್ತ್ರ ಕಸಿಯುವುದು ಆಗಿತ್ತು. ಆದರೆ ಅಕಸ್ಮಾತ್ತಾಗಿ ಯಾರದೋ ಅಜಾಗರೂಕತೆಯಿಂದ ಪೋಲೀಸರಿಗೆ ಎಚ್ಚರವಾಗಿ ಅವರು ಗುಂಡು ಹಾರಿಸಿದ್ದರಿಂದ ಇವರು ಪ್ರಾಣ ಉಳಿಸಿಕೊಳ್ಳಲು ತುಂಬಿದ ನದಿಗೆ ನಾಯಕ ಗಾಣಧಾಳ ನಾರಾಯಣಪ್ಪ, ಎಂ. ನಾಗಪ್ಪ, ಡಿ. ಪಂಪಣ್ಣ ನೆರವಿ ಇತರ ೮ ಜನರು ನದಿಗೆ ಹಾರಿ ಈಜಿ ಬಂದು ಪ್ರಾಣ ಉಳಿಸಿಕೊಂಡರು. ಆದರೆ ಹುಲಗುಂಜಿ ವೀರಣ್ಣನಿಗೆ ಈಜು ಬರುತ್ತಿರಲಿಲ್ಲ. ಆದರೂ ನದಿಗೆ ಹಾರಿ ಅಲ್ಲಿ ನದಿಯಲ್ಲಿದ್ದ ಮುಳ್ಳುಕಂಟಿ ಹಿಡಿದು ರಾತ್ರಿಯನ್ನೆಲ್ಲ ಕಳೆದು, ಸ್ನೇಹಿತರು ಬೆಳಗ್ಗೆ ಹುಡುಕಿಕೊಂಡು ಬಂದು ಅವರನ್ನು ಬಚಾವ ಮಾಡಿದರು.

## (೨) ರಾಯಚೂರಿನ ಸದರ ಬಜಾರ್ ಪೊಲೀಸ್ ಠಾಣೆಗೆ ಬಾಂಬು

ಸದರ ಬಜಾರ ಪೊಲೀಸ್ ಠಾಣೆ ಹೊರಗೆ ಬಾಂಬು ಇಟ್ಟು ಸ್ಫೋಟಿಸಲು ಯೋಜನೆಯನ್ನು ರೂಪಿಸಿದವರು ಡಿ. ಪಂಪಣ್ಣ ನೆರವಿ ಹಾಗೂ ಆಲ್ಕೋಡ ಅಮರೇಶರವರು. ಬಾಂಬು ಇಟ್ಟು ಅದಕ್ಕೆ ಉದ್ದನ್ನ ಬತ್ತಿ ಹೊಸೆದು ಬೆಂಕಿ ಇಟ್ಟು, ಸಿಡಿಯಲು ಹತ್ತು ನಿಮಿಷ ಬೇಕೆಂದು ಟಾಂಗಾ ಹತ್ತಿ ರೈಲ್ವೇ ಸ್ಟೇಷನ್ನಿಗೆ ಬಂದು ತುಂಗಭದ್ರಕ್ಕೆ ಪ್ರಯಾಣಿಸಿದರು. ಆದರೆ ಆ ಬಾಂಬಿನ ಬತ್ತಿ ಉರಿಯುತ್ತಿರುವಾಗ ಜನ ಹಾಗೂ ಪೊಲೀಸರು ಬಂದು ನೀರು ಹಾಕಿ



ಆರಿಸಿ ನೋಡಿದಾಗ ಬಾಂಬು ಇತ್ತು. ಬಾಂಬು ಇಟ್ಟವರಿಗೆ ಹುಡುಕಲು ಅವರೆಲ್ಲ ತುಂಗಭದ್ರೆಗೆ ಪರಾರಿಯಾಗಿದ್ದರು.

## (೩) ಕರೋಡಗಿರಿ ನಾಕಾಗಳ ಧ್ವಂಸ

ಗಾಣಧಾಳ, ಕರೋಡಗಿರಿ, ಮುದ್ದಾಪುರ, ಕರೋಡಗಿರಿ, ನಾಕಾ ಎಡಿವಾಳ ಮೊದಲಾದ ಕಡೆ ಕರೋಡಗಿರಿ ಬೆಂಕಿ ಹಚ್ಚಿಯೋ ಸಮೀಪ ಬಾಂಬು ಸಿಡಿಸಿ, ಅಲ್ಲಿದ್ದವರನ್ನು ಓಡಿಸಿ ಶಸ್ತ್ರಾಸ್ತ್ರ ಹಾಗೂ ಹಣ ಲೂಟಿ ಮಾಡಿದರು.

## (೪) ತಹಶೀಲ್ದಾರರನ್ನು ಓಡಿಸಿದ್ದು

ಸಿಂಧನೂರು ತಾಲೂಕಿನ ತಹಶೀಲ್ದಾರ ಮದನಸಿಂಗ ಮಾಹೆಲ ಒಬ್ಬ ಕ್ರೂರಿ ಅಧಿಕಾರಿ. ಅತ್ಯಾಚಾರ ಲೂಟಿ ಎಲ್ಲವು ಅವನ ಉಪಸ್ಥಿತಿಯಲ್ಲಿಯೇ ನಡೆಯುತ್ತಿತ್ತು. ಅವನು ಹೆಡಗಿನಾಳಿಗೆ ಬಂದಾಗ ೨೯–೦೧–೧೯೪೮ ರಂದು ರಾತ್ರಿ ಅವನ ಡೇರೆಗೆ ಬೆಂಕಿ ಹಚ್ಚಿ ಬಾಂಬು ಸಿಡಿಸಿ ಅವನನ್ನು ಓಡಿಸಿದರು.

## (೫) ಕಂದಾಯ ಅಧಿಕಾರಿ ಓಡಿಸಿದ್ದು

ಅದೇ ರೀತಿ ಆಯನೂರಿನಿಂದ ಕಂದಾಯ ಅಧಿಕಾರಿಯನ್ನು ಓಡಿಸಿ ಜನರ ಲೆವಿ ಹಾಗೂ ಕಂದಾಯ ಉಳಿಸಿದರು. ಈ ಎಲ್ಲ ಹೋರಾಟಗಳಲ್ಲಿ ಬೆಟ್ಟದೂರು ಶಂಕರಗೌಡ, ಎಂ. ನಾಗಪ್ಪ, ಅಮರೇಶ ಆಲ್ಕೋಡ್, ಡಿ. ಪಂಪಣ್ಣ, ಹೆಚ್. ವೀರನಗೌಡ, ಪರ್ವತರೆಡ್ಡಿ ಮೊದಲಾದವರು ಇದ್ದರು. ಇವರೆಲ್ಲರೂ ಚಳ್ಳೆ ಕೂಡ್ಲೂರು ಕ್ಯಾಂಪಿನವರು. ಇವರ ಜೊತೆಗೆ ತುಂಗಭದ್ರಾ ಹಾಗೂ ಮಂತ್ರಾಲಯ ಶಿಬಿರದ ಗಾಣಧಾಳ ನಾರಾಯಣಪ್ಪ, ಸಂಗಮ ಹುಚ್ಚಾಚಾರ, ಪಾಂಡುರಂಗರಾವ ಕಸಬೆ, ಗುಂಜಳ್ಳಿಯ ಜಗನ್ನಾಥಾಚಾರ್ಯ, ಗಂಗನಗಾರ ನಾಗಣ್ಣ, ತಪ್ಪಡಿ ನರಸರೆಡ್ಡಿ, ಕಾಶಿರಾವ ಪಟೇಲ್ ಮುಂತಾದ ನೂರು ಜನರು ಇದ್ದರು. ಇವರ ಹೋರಾಟ ಸಮೀಕ್ಷೆಯಲ್ಲಿ ಹತ್ತಾರು ಹಳ್ಳಿಗಳು ಇದ್ದು, ಪ್ರಮುಖವಾದವುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಮುಖವಾಗಿ ಇವರ ಕಾರ್ಯವು ಜನರ ರಕ್ಷಣೆ. ಅದನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಲು ತಮ್ಮ ಜೀವವನ್ನೇ ಪಣಕ್ಕಿಟ್ಟು ಹೋರಾಟ ಮಾಡಿದುದು ರಕ್ತ ರಂಜಿತ ಇತಿಹಾಸವಾಗಿದೆ.

### (೬) ಜೈಲುವಾಸ

ಕಾಂಗ್ರೆಸ್ ಕಾರ್ಯಕರ್ತರು ಬಳ್ಳಾರಿ ಜಿಲ್ಲೆಯ ಗಡಿ ಗ್ರಾಮವಾದ ರಾಜಾಪುರ ಮಾರ್ಗವಾಗಿ ಬರುವಾಗ ಇವರನ್ನು ಕಮ್ಮುನಿಸ್ಟರೆಂದು ೧೨ ಜನರನ್ನು ಹಿಡಿದು ಜೈಲಿಗೆ ಅಟ್ಟುತ್ತಾರೆ. ಆಗ ಅವರು ೧೫ ದಿನ ಜೈಲುವಾಸ ಅನುಭವಿಸಿದರು. ಹೈದರಾಬಾದ್ ಕಾಂಗ್ರೆಸ್ ಮುಖಂಡ ರಾಯಚೂರಿನ ವಕೀಲರಾದ ಜಿ. ಕೆ. ಪ್ರಾಣೇಶಾಚಾರ್ಯರು ಮದ್ರಾಸಿಗೆ ಹೋಗಿ ಇವರು ಕಮ್ಯುನಿಸ್ಟರಲ್ಲ, ಕಾಂಗ್ರೆಸ್ ಕಾರ್ಯಕರ್ತರು, ಭೂಗತ ಕಾರ್ಯಕರ್ತರು ಎಂದು ಮನಗಾಣಿಸಿದರು. ಆಗ ಇವರ ಬಂಧನ ವಿಮೋಚನೆಯಾಯಿತು.

❑

## ಅಧ್ಯಾಯ-೭
## ಹೈದ್ರಾಬಾದ್ ಪ್ರಾಂತ ಭಾರತದಲ್ಲಿ ವಿಲೀನ

ಇಲ್ಲಿಯ ಹೋರಾಟ ಅರಿತ ಭಾರತ ಸರ್ಕಾರವು ಜನರ ಮನವಿಗೆ ಕಿವಿಗೊಟ್ಟು, ಅವರ ಕಷ್ಟಗಳಿಗೆ ಸ್ಪಂದಿಸಿ, ಸೆಪ್ಟೆಂಬರ್ ೧೩ ರಂದು ಪೊಲೀಸ್ ಆಕ್ಷನ್ ಆಪರೇಶನ್ ಪೋಲೋ ಕೈಗೊಂಡಿತು. ಭಾರತದ ಸೈನ್ಯ ಎಲ್ಲ ಕಡೆಯಿಂದ ಹೈದ್ರಾಬಾದ್ ಪ್ರಾಂತವನ್ನು ಮುತ್ತಿತು. ದಕ್ಷಿಣ ಭಾರತದ ಪ್ರಧಾನ ದಂಡನಾಯಕ ಲೆ.ಜ. ಮಹಾರಾಜಸಿಂಗರ ನೇತೃತ್ವದಲ್ಲಿ ಮೇಜರ್ ಜನರಲ್ ಡಿ. ಎಸ್. ಬ್ರಾ. ಜನರಲ್ ಚೌಧರಿ, ಎ. ಎ. ರುದ್ರೆ, ಬ್ರಿಗೇಡಿಯರ್ ಶೋಯದತ್ತ ಸಿಂಗ್ ಮೊದಲಾದವರು ಸೈನ್ಯ ಮುನ್ನಡೆಸಿದರು. ಭಾರತ ಸೈನ್ಯಕ್ಕೆ ನಿಜಾಮ ಸೈನ್ಯವಾಗಲಿ, ಪಠಾಣರಾಗಲಿ ಎಲ್ಲಿಯೂ ತಡೆಯೊಡ್ಡಲಿಲ್ಲ. ನಳದುರ್ಗ ಮತ್ತು ಈಗಿನ ಕೊಪ್ಪಳ ಜಿಲ್ಲೆಯ ಮುನಿರಾಬಾದನಲ್ಲಿ ಯುದ್ಧವಾಗಿ ಸೋತು ಶರಣರಾದರು. ಕೇವಲ ೪ ದಿನದಲ್ಲಿ ಸೈನ್ಯ ಹೈದ್ರಾಬಾದಿಗೆ ಮುತ್ತಿದಾಗ ನಿಜಾಮನು ಭಾರತಕ್ಕೆ ಶರಣಾದನು. ಅಂದು ಸೆಪ್ಟೆಂಬರ್ ೧೭ ಸಾಯಂಕಾಲ, ಮರುದಿನ ಸೆಪ್ಟೆಂಬರ್ ೧೮ ರಂದು ಹೈದ್ರಾಬಾದ್ ಪ್ರಾಂತವು ಭಾರತದಲ್ಲಿ ವಿಧಿವತ್ತಾಗಿ ವಿಲೀನವಾಯಿತು. ಆಗ ಈ ಜಿಲ್ಲೆಯು ಭಾರತದ ಒಂದು ಭಾಗವಾಗಿ ಉಳಿಯಿತು. ಇದು ಹೈದ್ರಾಬಾದ್ ಪ್ರಾಂತದ ರಾಯಚೂರಿನ ಸಂಕ್ಷಿಪ್ತ ಇತಿಹಾಸವಾಗಿದೆ.

❑

# ಆಧಾರ ಗ್ರಂಥಗಳು


ಹೈದ್ರಾಬಾದ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆ: ರಾಮಣ್ಣ ಹವಳೆ. ಪ್ರಕಟಣೆ: ಸ್ವಾತಂತ್ರ್ಯ ಹೋರಾಟಗಾರರ ಸಂಘ.

ಹೈದ್ರಾಬಾದ ಪ್ರಾಂತ ವಿಮೋಚನೆಯಲ್ಲಿ ಗಜೇಂದ್ರಗಡ ಶಿಬಿರ: ರಾಮಣ್ಣ ಹವಳೆ. ಭೀಮಜ್ಜ ಮುರಡಿ ಪ್ರತಿಷ್ಠಾನ ಕುಷ್ಟಗಿ.

ವಿಮೋಚನೆ: ಜಿಲ್ಲಾ ಆಡಳಿತ ಕೊಪ್ಪಳ ಪ್ರಕಾಶಿತ, ಅಲ್ಲಮಪ್ರಭು ಬೆಟ್ಟದೂರು ಹಾಗೂ ಹೆಚ್. ಎಸ್. ಪಾಟೀಲ

ಸ್ವಾಮಿ ರಮಾನಂದ ತೀರ್ಥ ಹೋರಾಟದ ನೆನಪುಗಳು : ಸ್ವಾಮಿ ರಮಾನಂದತೀರ್ಥ

ವಿ. ಹೆಚ್. ದೇಸಾಯಿ 'ವಂದೇಮಾತರಂ ದಿಂದ ಜನಗಣದವರೆಗೆ' ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ ಹುಬ್ಬಳ್ಳಿ.

ಸ್ವಾತಂತ್ರ್ಯ ಹೋರಾಟಗಾರ ಗಂಗನಗಾರ ನಾಗಣ್ಣ ಅವರ ಸಂದರ್ಶನ ಟಿಪ್ಪಣಿ ೧೯೮೨.

ನ್ಯಾಯಾಲಯದ ತೀರ್ಪಿನ ಆದೇಶ ಪ್ರತಿ. ೧೯೪೨

ಕೊಪ್ಪಳ ನಾಡಿನ ಸ್ವಾತಂತ್ರ್ಯ ಹೋರಾಟ: ರಾಮಣ್ಣ ಹವಳೆ–ಭೀಮಜ್ಜ ಮುರಡಿ ಪ್ರತಿಷ್ಠಾನ ಕುಷ್ಟಗಿ.

ಎಂ. ನಾಗಪ್ಪ, ಬೆಟ್ಟದೂರು ಶಂಕರಗೌಡ, ಕಾಶಿರಾವ ಪಾಟೀಲ ಹಾಗೂ ಸದಾಶಿವ ರಾಜಪುರೋಹಿತ ಅವರ ಫೈಲುಗಳು ಹಾಗೂ ಸಂದರ್ಶನಗಳು.

ಸ್ವಾತಂತ್ರ್ಯದ ಸಾವಿರ ತೊರೆಗಳು – ಎಂ. ಶಂಕರನಾರಾಯಣರಾವ್.


# ಅನುಬಂಧ


## ಛಾಯಾಚಿತ್ರಗಳು


ಹೈದ್ರಾಬಾದ್ ಸಂಸ್ಥಾನ ನಕಾಶೆ



ಹೈದ್ರಾಬಾದ್ ಕರ್ನಾಟಕ


ಪಿ . ಕೃಷ್ಣರಾವ್


ಎಂ. ನಾಗಪ್ಪ



ಎಂ. ಹಂಪಯ್ಯ


ಆರ್. ಜಿ. ಜೋಶಿ


ಸದಾಶಿವ ರಾಜಪುರೋಹಿತ್



ಅದ್ವಿರಾವ್ ಫಡ್ನೀಸ್




ಬೆಟ್ಟದೂರು ಶಂಕರಗೌಡ



ಡಿ. ಪಾಪಣ್ಣ ನೆರ್ವಿ



ಡಾ. ಡಿ.ಜಿ. ದೇಶಪಾಂಡೆ



ಗುಡಗುಂಟಿ ರಾಮಾಚಾರ್



ಘನದಹಲ ನಾರಾಯಣಪ್ಪ



ಗಂಗನ್‌ನಗರ್ ನಾಗಣ್ಣ



ಜನಾರ್ದನ ದೇಸಾಯಿ



ಕಾಶೀರಾವ್ ಪಾಟೀಲ್

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |